ಅಚಲ

ಮೇ 1992 ಬೆಲೆ ರೂ. 1-50



ಸಂಪುಟ 8 ಸಂಚಿಕೆ 7

"ಅಚಲ" ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹದಿನಾರು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು, ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, 1ನೇ ಮೇನ್, ವೈಯಾಲಿ ಕಾವಲ್
ಬೆಂಗಳೂರು–560 003.

ಪುಸ್ತಕ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಸಂಪಾದಕ ಮಂಡಳಿ :

ಎನ್. ಗಾಯತ್ರಿ, ನೇಮಿಚಂದ್ರ, ದೇವಿ,
ಡಾ॥ ಬಿ. ಎನ್. ಸುಮಿತ್ರಾಬಾಯಿ

ಚಂದಾ ವಿವರ :

ವಾರ್ಷಿಕ ಚಂದಾ	:	ರೂ. 15–00
ಬಿಡಿ ಪ್ರತಿ	:	ರೂ. 2–00
ವಿಶೇಷ ಪ್ರತಿ	:	ರೂ. 5–00
ಆಜೀವ ಚಂದಾ		
ವ್ಯಕ್ತಿಗಳಿಗೆ	:	ರೂ. 150–00
ಸಂಸ್ಥೆಗಳಿಗೆ	:	ರೂ. 200–00

Printed at : PRINTSWELL, 78, 3rd Main Road Nagappa Block, Srirampuram, Bangalore-21 & Published by Dr. G. Ramakrishna on behalf of Jagruthi Mahila Adhyayana Kendra
26, I Main, Vyalikaval, Bangalore-560003.
Editor : N. GAYATRI

ಪ್ರಥಮ ಅನುಪಮ ಪ್ರಶಸ್ತಿ ವಿಜೇತೆ ಶ್ರೀಮತಿ ಹೆಚ್. ವಿ. ಸಾವಿತ್ರಮ್ಮ ಕಳೆದ ಐದು ದಶಕಗಳಿಗೂ ಹೆಚ್ಚು ಕಾಲದಿಂದ ತಮ್ಮನ್ನು ಬರವಣಿಗೆಯಲ್ಲಿ ತೊಡಗಿಸಿಕೊಂಡವರು. ಕನ್ನಡ ಸಾಹಿತ್ಯದ ಪ್ರಮುಖ ಸ್ತ್ರೀವಾದಿ ಬರಹಗಾರರಲ್ಲಿ-ಒಬ್ಬರಾದ ಸಾವಿತ್ರಮ್ಮನವರು ಮುಖ್ಯವಾಗಿ ತಮ್ಮ ಕತೆ, ಕಾದಂಬರಿಗಳಲ್ಲಿ ಗಾಢವಾದ ಸ್ತ್ರೀ ಪ್ರಜ್ಞೆಯನ್ನು ಪ್ರಕಟಿಸುತ್ತಾರೆ. ಅಂತರರಾಷ್ಟ್ರೀಯ ಮಹಿಳಾವರ್ಷದ ಸಂದರ್ಭದಲ್ಲಿ ಇಂಗ್ಲೀಷ್ ಪಾಕ್ಷಿಕಕ್ಕಾಗಿ ಬರೆದ, ಆದರೆ ಪ್ರಕಟವಾಗದ ಲೇಖನ. ಈ ಸಂಚಿಕೆಯ 5ನೇ ಪುಟದಲ್ಲಿ

ಬಜೆಟ್ ವಿನಾಯಿತಿ ಏಕೆ ?

ಕೇಂದ್ರ ಬಜೆಟ್‌ನಲ್ಲಿ ದುಡಿಯುವ ಮಹಿಳೆಯರಿಗೆ ವರಮಾನ ತೆರಿಗೆಯಲ್ಲಿ ವಿನಾಯಿತಿ ತೋರಿಸಲಾಗಿದೆ. ಇದು ಸರಿಯೇ ? ಮಹಿಳೆಯರಿಗೆ ವಿನಾಯಿತಿ ಕೊಟ್ಟದ್ದು ನ್ಯಾಯ ಸಮ್ಮತವೇ ? ಈ ಪ್ರಶ್ನೆಗಳಿಗೆ 'ಅಚಲ' ಓದುಗರು ಬಿಚ್ಚು ಮನಸ್ಸಿನಿಂದ ಉತ್ತರಿಸಲಿದ್ದಾರೆ– ಮುಂದಿನ (ಜುಲೈ) ಸಂಚಿಕೆಯ 'ಸಂವಾದ'ದಲ್ಲಿ.

ದುಡಿಯುವ ಮಹಿಳೆ

ಉದ್ಯೋಗಸ್ಥ ಮಹಿಳೆ ಎಂದಾಕ್ಷಣ ಹೆಚ್ಚಾಗಿ ಪಟ್ಟಣ ಪ್ರದೇಶದಲ್ಲಿ ನೂರಾರು ಸಂಖ್ಯೆಯಲ್ಲಿ ಕಚೇರಿ, ಬ್ಯಾಂಕು, ಕಾರ್ಖಾನೆಗಳಿಗೆ ಹೋಗುವ ಮಹಿಳೆಯರ ಚಿತ್ರ ಕಣ್ಮುಂದೆ ಬರುವುದು ಸಹಜ. ಆದರೆ ಅದು ಅಪೂರ್ಣ ಚಿತ್ರ ಎಂಬುದೂ ಅಷ್ಟೇ ಸತ್ಯ. ಕಾಂಟ್ರಾಕ್ಟ್ ಪದ್ಧತಿಯಲ್ಲಿ ಕೆಲಸ ಮಾಡುವ ಸಹಸ್ರಾರು ಮಹಿಳೆಯರು ಕಟ್ಟಡ ನಿರ್ಮಾಣ, ಬೀಡಿ ಉದ್ದಿಮೆ. ಅಗರಬತ್ತಿ ತಯಾರಿಕೆಯಂಥ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಜತೆಗೆ ಕೃಷಿ ಕ್ಷೇತ್ರದಲ್ಲಿ ಹಲವು ಕಡೆ ವೇತನವಿಲ್ಲದ ಕುಟುಂಬ ಸಾಗುವಳಿಯಾಗಿ ಕೆಲಸ ಮಾಡುತ್ತಿರುವವರ ಸಂಖ್ಯೆ ಅಸಂಖ್ಯ.

ದುಡಿವ ರಂಗವನ್ನು ಮಹಿಳೆ ಪ್ರವೇಶಿಸಿದ್ದೇ ಬಹುಶಃ ಕೃಷಿ ಕ್ಷೇತ್ರದಿಂದ. ತನ್ನ ಮನೆಯ ಗಂಡಸರ ಜತೆ ವ್ಯವಸಾಯ ಕಾರ್ಯದಲ್ಲಿ ನಿರತಳಾದ ಆವಳು ಮುಂದೆ ಬೀಡಿ ಕಟ್ಟುವ, ಮಡಕೆ ಮಾಡುವಂಥ ಗುಡಿ ಕೈಗಾರಿಕೆಗಳನ್ನ ಪ್ರವೇಶಿಸಿದಳು. ಇತಿಹಾಸದುದ್ದಕ್ಕೂ ಅವಳು ಇಂಥ ಅನೇಕ ಕ್ಷೇತ್ರಗಳಲ್ಲಿ ತನ್ನ ದುಡಿಯುವ ಕೈಗಳನ್ನು ನೀಡಿದ್ದರೂ ಇಂದಿಗೂ ಸಮಾನ ವೇತನ ಅವಳ ಪಾಲಿಗೆ ಮರೀಚಿಕೆಯೇ ಆಗಿದೆ. ಕೃಷಿ ಕಾರ್ಮಿಕರ ಕನಿಷ್ಟ ವೇತನ 19 ರೂಪಾಯಿ 65 ಪೈಸೆಗಳೆಂದು ಸರ್ಕಾರ ಘೋಷಿಸಿದೆ. ಹತ್ತು ರೂಪಾಯಿ ಕೂಡ ಪಡೆಯದ ಹೆಣ್ಣುಕೂಲಿಯಾಳುಗಳಿದ್ದಾರೆ. ಅಸಂಘಟಿತ ಕಾರ್ಮಿಕರಿರುವ ಮತ್ತೊಂದು ಪ್ರಮುಖ ಕ್ಷೇತ್ರ ಕಟ್ಟಡ ನಿರ್ಮಾಣ. ಕಂಟ್ರಾಕ್ಟರ್ ಆದವನು ನಿರ್ಮಾಣ ಸ್ಥಳದಲ್ಲಿ ಕಾರ್ಮಿಕರಿಗೆ ನೀರು, ಶೌಚಾಲಯ, ಪ್ರಥಮ ಚಿಕಿತ್ಸೆ, ಕ್ಯಾಂಟೀನ್ ಮತ್ತು ಶಿಶುಪಾಲನಾ ಕೇಂದ್ರಗಳನ್ನು ಒದಗಿಸಬೇಕು. ಯಾವ ಕಟ್ಟಡ ಕಾರ್ಮಿಕರಿಗೆ ಈ ಸೌಲಭ್ಯ ಲಭಿಸಸಿದೆ ಎಂಬ ಪ್ರಶ್ನೆಗೆ ಉತ್ತರ ನಿರಾಶಾದಾಯಕ. ಒಂದೇ ಸ್ಥಳದಲ್ಲಿ ಇವರು ಇಲ್ಲದಿರುವುದು ಸಂಘಟನೆಗೆ ತೊಡಕಾಗಿದೆ. ಆದರೂ ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘವು ಈ ಅಸಂಘಟಿತರನ್ನು ಒಗ್ಗೂಡಿಸುವ ಪ್ರಯತ್ನ ನಡೆಸಿರುವುದು ಸ್ವಾಗತಾರ್ಹ.

ದಿನಗೂಲಿ ಪಡೆಯುವವರೇ ಹೆಚ್ಚಾಗಿರುವ ಕೆಳ ವರ್ಗದ, ಅಸಂಘಟಿತ ಕಾರ್ಮಿಕ ಮಹಿಳೆಯರಿಗೆ ದುಡಿಮೆ ಅನಿವಾರ್ಯ. ಬದುಕಿನ ಅಗತ್ಯ. ಆದರೆ ಮಧ್ಯಮ ವರ್ಗದಲ್ಲಿ ಹೆಣ್ಣಿಗೆ ದುಡಿಮೆ ಐಚ್ಛಿಕವಾಗಿರಬಹುದು. ಇಲ್ಲಿಯೂ ಅನಿವಾರ್ಯ ಸ್ಥಿತಿ ಇಲ್ಲದ್ದಿಲ್ಲ. ಹೆಣ್ಣು ದುಡಿಯ ಬೇಕೆ ಬೇಡವೆ ಎಂಬ ವಾದವನ್ನು ಬದಿಗೊತ್ತಿ, ಇಂದು ಮಹಿಳೆ ಉದ್ಯೋಗಸ್ಥಳಾಗಬೇಕಾದ ಅನಿವಾರ್ಯತೆಯನ್ನು ಒಪ್ಪಿಕೊಂಡು ಅದಕ್ಕೆ ಅಗತ್ಯವಾದ ಮಾನಸಿಕ ಹೊಂದಾಣಿಕೆಯನ್ನು ಮಾಡಿಕೊಳುವುದು ಮುಖ್ಯ. ಇದರಿಂದ ಕುಟುಂಬ ಜೀವನ ಆರೋಗ್ಯಕರವಾಗಿರುತ್ತದೆ. ಮನೆ ಮತ್ತು ಮಗುವಿನ ಹೊಣೆ ಹೆಣ್ಣಿನಷ್ಟೇ ಗಂಡಿನ ಮೇಲೂ ಇದೆ ಎಂಬ ಅಂಶವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಷ್ಟೇ ಅಲ್ಲ, ಅನಿವಾರ್ಯ ಕೂಡ, ಇಂದಿನ ಆಧುನಿಕ ಮತ್ತು ಸುಸಜ್ಜಿತವಾದ ಅಡುಗೆ ಮನೆ ವ್ಯವಸ್ಥೆಯು ಗೃಹಕೃತ್ಯವನ್ನು ಶ್ರಮದಿಂದ

ದೂರವಾಗಿರಿಸಿದೆ. ಶಿಶು ಪಾಲನಾ ಕೇಂದ್ರ ಮತ್ತು ಮಕ್ಕಳ ಆಟದ ಮನೆಯಂಥ ವ್ಯವಸ್ಥೆಗಳು ಆಧುನಿಕ ಸಮಾಜದ ಕೊಡುಗೆಗಳೇ ಆಗಿದ್ದು ದುಡಿಯುವ ಸ್ತ್ರೀ-ಪುರುಷರಿಗೆ ವರದಾನವೆನಿಸಿಕೊಂಡಿವೆ.

ದುಡಿಯುವ ಮಹಿಳೆ ಅಪೇಕ್ಷಿಸುವುದು ಇಷ್ಟೇ. ಸಮಾನ ದುಡಿಮೆಗೆ ಸಮಾನ ವೇತನ ಮತ್ತು ಸಮಾನ ಅವಕಾಶ. ಜೊತೆಗೆ ಶೌಚಾಲಯ, ಕುಡಿಯುವ ನೀರು, ಶಿಶುಪಾಲನಾ ಕೇಂದ್ರದಂಥ ಮೂಲಭೂತ ಸವಲತ್ತುಗಳು, ಸರ್ಕಾರವು ತನ್ನ ಜವಾಬ್ದಾರಿಯಿಂದ ದೂರ ಸರಿಯುವುದು ಸಾಧ್ಯವಿಲ್ಲ. ಕಾನೂನು ಮತ್ತು ನಿಯಮ ರೂಪಿಸಿಬಿಡುವುದಷ್ಟೇ ಹೊಣೆಗಾರಿಕೆಯಲ್ಲ. ಕಾನೂನಿನ ಕಟ್ಟು ನಿಟ್ಟಿನ ಜಾರಿ ಕೂಡಾ ಅಷ್ಟೇ ಮುಖ್ಯ. ಸಂಘಟಿತ ವಲಯಗಳಲ್ಲಿ ಕಾನೂನು ಜಾರಿಗೆ ಒತ್ತಾಯಿಸಲು ಕಾರ್ಮಿಕ ಸಂಘಗಳು ಹೋರಾಡುತ್ತವೆ. ಆದರೆ ಅಸಂಘಟಿತ ಕ್ಷೇತ್ರಗಳಲ್ಲಿ ನಿಯಮ ಪರಿಪಾಲನೆ ಉಸ್ತುವಾರಿ ಸರ್ಕಾರದಿಂದಲೇ ಆಗಬೇಕಾಗಿದೆ. ಕನಿಷ್ಠ ಕೂಲಿ ಕೊಡಿಸುವುದೂ ಅಸಾಧ್ಯವಾದರೆ ಅದು ಸರ್ಕಾರದ ಅಸಾಮರ್ಥ್ಯವನ್ನು ತೋರಿಸುತ್ತದೆಯಷ್ಟೆ.

ಕಾರ್ಮಿಕ ಹೋರಾಟದ ಪ್ರತಿಫಲ ಪಡೆಯುತ್ತಿರುವ, ಮುಖ್ಯವಾಗಿ ಮಧ್ಯಮ ವರ್ಗದ ದುಡಿಯುವ ಮಹಿಳೆಯರು, ಇನ್ನೂ ಸೌಲಭ್ಯಗಳಿಂದ ವಂಚಿತರಾಗಿರುವ ಅಸಂಖ್ಯ ದುಡಿಯುವ ಮಹಿಳೆಯರನ್ನು ಸಂಘಟಿಸಿ ಹೋರಾಟದ ಪಥದತ್ತ ಅವರನ್ನು ಒಯ್ಯುವುದು ಇಂದಿನ ಅಗತ್ಯವಾಗಿದೆ.

— ದೇವಿ

ಅಂತರರಾಷ್ಟ್ರೀಯ ಮಹಿಳಾ ವರ್ಷ

ಎಚ್. ವಿ. ಸಾವಿತ್ರಮ್ಮ

ಅಂತರಾಷ್ಟ್ರೀಯ ಮಹಿಳಾ ವರ್ಷ ಕೊನೆಗೊಳ್ಳುತ್ತಿದೆ. ಇದೀಗ "ಮಹಿಳೆಯರ ದಶಕ"ದ ಮಾತುಗಳು ಕೇಳಿಬರುತ್ತಿವೆ. ಈ ಅವಧಿಯಲ್ಲಿ ನಿಜವಾಗಿ ಸಾಧಿಸಿದ್ದೇನು ಎಂಬುದನ್ನು ವಿವೇಚಿಸಬೇಕಾಗಿದೆ. ಅನೇಕ ಗಣ್ಯ ಮಹಿಳೆಯರು, ಮಹನೀಯರು ಸಮಾನ ಕೆಲಸಕ್ಕೆ ಸಮಾನ ವೇತನ, ಸಮಾನ ಸಾವಕಾಶ ಉದ್ಯೋಗ ಅವಕಾಶ ಮುಂತಾದ ಹಲವು ವಿಚಾರ, ಸಲಹೆಗಳನ್ನು ಮುಂದಿಟ್ಟಿದ್ದಾರೆ. ಭಾರತೀಯ ಮಹಿಳೆಯರು ಈ ಬಗ್ಗೆ ದೂರಬೇಕಾದ ಆವಶ್ಯಕತೆ ಇಲ್ಲ. ದೇಶದ ಸ್ವಾತಂತ್ರ್ಯ ಗಳಿಕೆಯೊಂದಿಗೇ ಮಹಿಳೆಯರಿಗೆ ಮತದಾನದ ಹಕ್ಕು ದೊರೆತಿದೆ. ಶಿಕ್ಷಣಕ್ಕೆ ಅವಕಾಶಗಳು ಎಂದಿನಿಂದಲೋ ಇವೆ. ಕಳೆದ ಕೆಲವು ದಶಕಗಳಲ್ಲಿ ಮಹಿಳೆಯರ ಶಿಕ್ಷಣ ತೀವ್ರವಾಗಿ ನಡೆದಿದೆ. ಮಹಿಳೆಯರು ಈಗ ಹಲವಾರು ಕ್ಷೇತ್ರಗಳಲ್ಲಿ ದುಡಿಯತೊಡಗಿದ್ದಾರೆ. ಆದರೆ ಶಿಕ್ಷಣ ಮತ್ತು ಹಣಗಳಿಸುವ ಸಾಮರ್ಥ್ಯದ ಹೆಚ್ಚುವಿಕೆಯ ಜೊತೆಯಲ್ಲಿ ಮಹಿಳೆಯರ ಸ್ಥಿತಿಯೂ ಸುಧಾರಿಸಿದೆಯೇ? ಅನೇಕ ಸುಶಿಕ್ಷಿತ ಪುರುಷರ ಅಭಿಪ್ರಾಯಗಳನ್ನು ಕೇಳಿದಾಗ ನನಗೆ ಅನ್ನಿಸುತ್ತದೆ ; ಮಹಿಳೆಯರನ್ನು ಇನ್ನೂ ಸದಾ ಮುದ್ದು ಮಾಡಿ ಕಾಪಾಡಬೇಕಾದ ಆದರೆ 'ಸರಿಯಾದ ಸ್ಥಾನದಲ್ಲಿ' ಇರಿಸಬೇಕಾದ ಆಟದ ವಸ್ತುಗಳಂತೆ ಹಗುರವಾಗಿಯೇ ನೋಡಲಾಗುತ್ತಿದೆ.

ಪುರುಷರ ಈ ಧೋರಣೆಗೆ ಮಹಿಳೆಯರ ಕಾಣಿಕೆಯೂ ಇದೆ. ಬ್ರಾಗಳನ್ನು ಸುಡುವುದು, ಬೆತ್ತಲೆ ಓಟಗಳು ಸ್ವಾತಂತ್ರ್ಯವನ್ನೇನೂ ಸೂಚಿಸುವುದಿಲ್ಲ. ಅನೇಕ ಮಹಿಳೆಯರು ಇಂದು ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ಬ್ಯಾಂಕುಗಳಲ್ಲಿ ದುಡಿಯುತ್ತಿದ್ದಾರೆ. ಆದರೆ ಅವರೆಲ್ಲಾ ತಮ್ಮನ್ನು ನಿಜವಾಗಿ ಸ್ವತಂತ್ರರೆಂದು ವಿಮುಕ್ತರೆಂದು ಭಾವಿಸುತ್ತಾರೆಯೇ ? ಕುಟುಂಬದ ಆದಾಯವನ್ನು ಹೆಚ್ಚಿಸಲು ಉದ್ಯೋಗವೊಂದನ್ನು ಕೈಗೊಳ್ಳುವುದಕ್ಕೂ 'ಯಜಮಾನ'ರ ಅನುಮತಿ ಬೇಕು, ಇಲ್ಲದಿದ್ದಲ್ಲಿ ಕುಟುಂಬವೇ ಒಡೆದೀತು ಇಲ್ಲವೇ ಮನೆಯ ಶಾಂತಿ ಕದಡೀತು. ಅಂತರರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಈ ಪರಿಸ್ಥಿತಿಯೇನೂ ಬದಲಾಗಲಿಲ್ಲ. ಮಹಿಳಾ ದಶಕದಲ್ಲೂ, ಮುಂದಿನ ತಲೆಮಾರಿನಲ್ಲೂ ಅದು ಬದಲಾಗದು.

ಈ ಪರಿಸ್ಥಿತಿಯಲ್ಲಿ ಮಹಿಳೆ ತನ್ನ ಸಾಮರ್ಥ್ಯವನ್ನು ಕಂಡುಕೊಳ್ಳದಿರುವುದರಿಂದ ಉಂಟಾದದ್ದು, ತಾನು ದುರ್ಬಲಳೆಂದೇ ಯೋಚಿಸುವಂತೆ ಆಕೆಗೆ ಬೋಧನೆ ನಡೆದಿದೆ. ಮಕ್ಕಳನ್ನು ಪಡೆಯಬಲ್ಲ ಅವಳ ಸಾಮರ್ಥ್ಯದ ವಿಷಯವನ್ನು ಗಮನಿಸೋಣ, ಮಹಿಳೆಯರು ಮದುವೆಯಾಗಿ ಅಧೀನ ಸ್ಥಿತಿಗೆ ಹೋಗಲು ಕಾತರಿಸುವುದು ಏತಕ್ಕೆ ? ಸ್ತ್ರೀ ಪುರುಷರಿಬ್ಬರಿಗೂ ಸಮಾಜವಾದ ಲೈಂಗಿಕ ತುಡಿತದ ಜೊತೆಗೆ ಆಕೆಗೆ ಇರುವ ಮಕ್ಕಳ ಹಂಬಲ, ಮುಪ್ಪಿನ ಕಾಲದ ಏಕಾಕಿತನದ ವಿರುದ್ಧವಾದ ಸುಭದ್ರತೆಯ ಅಪೇಕ್ಷೆಗಳೇ ಈ ಕಾತುರತೆಯ ಮೂಲ. ಅವಿವಾಹಿತೆಯಾಗಿ ಉಳಿಯಬೇಕೆಂದರೆ ತನ್ನ ಬಗ್ಗೆ

ಕೀಳರಿಮೆ ಅವಳಲ್ಲಿ ಬೆಳೆಯುತ್ತದೆ. 'ಮುದಿಕನ್ಯೆ' ಎಂಬ ಪದವನ್ನು ಸೃಷ್ಟಿಸಿದ್ದು ಪುರುಷರ ಪ್ರಪಂಚತಾನೆ.

ಈ ಕೊರತೆಯನ್ನು ನಿವಾರಿಸುವುದಕ್ಕೆ ವಿವಾಹ ಪದ್ಧತಿಯನ್ನು ರದ್ದುಪಡಿಸುವುದೇ ಉಪಾಯ. ಅವಿವಾಹಿತ, ಮಾತೆಯರಿಗೆ ಮತ್ತು ಅವರ ಸಂತಾನಗಳಿಗೆ ಅಂಟಿಸಲ್ಪಡುವ ಸಾಮಾಜಿಕ ಕಳಂಕವನ್ನು ತೊಡೆದು ಹಾಕಿದ್ದೇ ಆದರೆ ಎಷ್ಟೋ ಸಮಸ್ಯೆಗಳು ಇಲ್ಲವಾಗುತ್ತವೆ. ಮಾನವ ಸ್ವಭಾವ ಬದಲಾಗದು, ಆದ್ದರಿಂದ ಚತುರಳಾದ ಯಾವೊಬ್ಬ ಹುಡುಗಿಗೂ ಮಗುವಿನ ದಾತನೊಬ್ಬ ದೊರೆಯದೆ ಇರಲಾರ, ಆ ಮಗು ಪೂರ್ಣವಾಗಿ ಆಕೆಯದೇ ಆಗಿರುವುದರಿಂದ ಬದುಕಿನ ಏಕಾಕಿತನಕ್ಕೆ ಆಕೆ ಹೆದರುವ ಅಗತ್ಯವಿರುವುದಿಲ್ಲ. ಬದಲಾಗಿ ಒಂದು ಮನೆಗಾಗಿ, ಗುರಿಯಿಲ್ಲದ ಬದುಕಿನ ಮುಪ್ಪಿನ ಏಕಾಕಿತನದಿಂದ ಬಿಡುಗಡೆ ಪಡೆಯುವುದಕ್ಕಾಗಿ ಮದುವೆ ಬೇಕೆಂದು ಬೇಡುವ ಗತಿ ಆಗ ಪುರುಷರ ಪಾಲಿಗೆ ಬರುತ್ತದೆ.

ಇದರಲ್ಲಿ ಇನ್ನೂ ಕೆಲವು ಅನುಕೂಲಗಳಿವೆ. ಮಗುವನ್ನು ಹೆರುವುದರ ವೇದನೆಯನ್ನು ಅರಿತ ಯಾವೊಬ್ಬ ಮಹಿಳೆಯೂ ಒಂದು, ಎರಡಕ್ಕಿಂತ ಹೆಚ್ಚಿಗೆ ಮಕ್ಕಳನ್ನು ಪಡೆಯಲು ಹಂಬಲಿಸಲಾರಳು. ಕುಟುಂಬ ಯೋಜನೆಗಾಗಿ ಈಗ ವ್ಯಯಿಸಲಾಗುತ್ತಿರುವ ದೊಡ್ಡ ಪ್ರಮಾಣದ ಹಣವನ್ನು ಆಗ ಇನ್ನೂ ಹೆಚ್ಚು ಉಪಯುಕ್ತ ಕಾರ್ಯಗಳಲ್ಲಿ ತೊಡಗಿಸಲು ಸಾಧ್ಯ. ದುಡಿಯುವ ಮಹಿಳೆಯರ ಮಕ್ಕಳಿಗಾಗಿ ಕ್ರಷ್‌ಗಳ, ನರ್ಸರಿಗಳ ಸ್ಥಾಪನೆಗಾಗಿ ಅದನ್ನು ವ್ಯಯಿಸಬಹುದು.

ತಲತಲಾಂತರವಾಗಿ ದುಡಿಯುವ ಪುರುಷನಿಗೆ ಈಗ ತಾನು ದುಡಿದು ಕಾಪಾಡಬೇಕಾದ ಕುಟುಂಬ ಯಾವುದೂ ಇಲ್ಲವಾದರೂ ರೂಢಿಗತವಾದ ದುಡಿಮೆಯ ಅಭ್ಯಾಸವನ್ನು ಬಿಡುವುದು ಸಾಧ್ಯವಾಗದು. ತಮ್ಮ ಮಕ್ಕಳನ್ನು ಸಾಕುವುದಕ್ಕಾಗಿ ಮಹಿಳೆಯರು ದುಡಿಯುವುದು ಅನಿವಾರ್ಯ. ಹೀಗೆ ಸಾಮಾಜಿಕವಾಗಿ ಉಪಯುಕ್ತ ಪ್ರಜೆಗಳ ಸಂಖ್ಯೆ ದ್ವಿಗುಣಿತವಾಗುತ್ತದೆ. ಮಹಿಳೆಯರು ಮದುವೆಗಾಗಿ ಕಂಗಾಲಾಗುವುದು ತಪ್ಪಿದರೆ, ವರದಕ್ಷಿಣೆ, ಅತ್ತೆಯ ಕಾಟಗಳಂಥ ಸಾಮಾಜಿಕ ಪೀಡೆಗಳು ತಾವಾಗಿಯೇ ಇಲ್ಲವಾಗುತ್ತವೆ. ತಮ್ಮ ಸಮಸ್ಯೆಗೆ ಪರಿಹಾರ ಒದಗಿಸುವ ಈ ದಿಕ್ಕಿನತ್ತ ನಮ್ಮ ಮಹಿಳೆಯರು ಏಕೆ ಗಮನ ಹರಿಸಬಾರದು ? ಮಹಿಳಾ ಆಡಳಿತಗಾರರು, ಸಂವಿಧಾನವನ್ನು ರಚಿಸಿ, ಬದಲಿಸಬಲ್ಲವರು, ಸಾಮಾಜಿಕ ಕಾರ್ಯಕರ್ತರು, ಸುಧಾರಕರು, ಶಿಕ್ಷಣವೇತ್ತರಂಗಳೆಲ್ಲ ಸ್ತ್ರೀ–ಪುರುಷರ ಸಂಬಂಧವನ್ನು ಬಂಧನದಿಂದ ಬಿಡಿಸಿ, ಸಹಜ ಸಹಚಾರ್ಯವನ್ನಾಗಿ ಪರಿವರ್ತಿಸಬಲ್ಲ ವಿಧಾನದತ್ತ ಏಕೆ ತಮ್ಮ ಆಲೋಚನೆಗಳನ್ನು ಹರಿಸಬಾರದು ?

ಉತ್ಸಾಹಶಾಲಿಗಳಾದ, ಕ್ರಿಯಾತತ್ಪರರಾದ, ಯುವಪೀಳಿಗೆಯ ಮಹಿಳೆಯರು ತಮ್ಮ ಹಣೆ ಬರಹವನ್ನು ತಮ್ಮ ಕೈಗೇ ತೆಗೆದುಕೊಂಡು, ತಮ್ಮ ಅಪೇಕ್ಷೆಗಳಿಗೆ ತಿದ್ದಿ ರೂಪಿಸಲು ಸಮರ್ಥರಾಗಿರುತ್ತಾರೆ. ಅಂಥವರು ಮಾತ್ರ ಈ ಪರಿಹಾರವನ್ನು ಸಾಧಿಸಬಲ್ಲರೇ ಹೊರತು ತಮ್ಮ ಸಂಕೋಲೆಗಳನ್ನು, ನಿಟ್ಟುಸಿರುಗಳನ್ನೇ ತಬ್ಬಿಕೊಳ್ಳಬಯಸುವ ಅಬಲೆಯರಿಗೆ ಇದು ಅಸಾಧ್ಯ.

ಉದ್ಯೋಗಸ್ಥ ಮಹಿಳೆ

ನೇಮಿಚಂದ್ರ

" ಉದ್ಯೋಗಂ ಪುರುಷ ಲಕ್ಷಣಂ " ಎಂದು ನಮ್ಮ ಸಮಾಜ ಹೆಣ್ಣಿನ ಸ್ವಾವಲಂಬನೆಯ ಅಗತ್ಯಕ್ಕೆ ವಿಶೇಷ ಗಮನ ನೀಡಿಲ್ಲ. ಹೆಣ್ಣು ಮಕ್ಕಳಿಗೆ ಓದು–ವಿದ್ಯಾಭ್ಯಾಸ ನೀಡಿ, ಉದ್ಯೋಗ ಹಿಡಿಯುವಂತೆ ಪ್ರೋತ್ಸಾಹಿಸಿ ಬದುಕಿಗೆ ತಯಾರಿಸುವ ಬದಲು, ಹಾಡು–ಹಸೆ ಹೇಳಿಕೊಟ್ಟು ಮದುವೆಗೆ ತಯಾರಿಸಿದರೆ ಸಾಕು ಎಂಬಂತೆ ಬೆಳೆಸುತ್ತಾರೆ. ವೇಗದ ಬದುಕಿನ ಅಭದ್ರತೆಗಳು ಕಾಡುವ ಈ ಕಾಲದಲ್ಲಿ, ವೈಧವ್ಯಕ್ಕೋ, ವಿಚ್ಛೇದನಕ್ಕೋ ಬದುಕು ಸಿಕ್ಕಾಗ, ಸ್ವಂತ ಉದ್ಯೋಗದ ಮಹತ್ವ ತಟ್ಟನೆ ಅರಿವಾಗುತ್ತದೆ. ಹಾಗೆಂದೇ ಉದ್ಯೋಗಸ್ಥ ಮಹಿಳೆಯರೆಲ್ಲರ ಹಿನ್ನೆಲೆ ಒಂದೇ ಇಲ್ಲ. "ನಾವು ದಂಡಿದೇ ದುಡಿಯುತ್ತೇವೆ" ಎಂಬ ಉದ್ದೇಶ ಇಟ್ಟುಕೊಂಡು ಬೆಳೆದು ಉನ್ನತ ಶ್ರೇಣಿಯ ಹುದ್ದೆಗಳ ತಲುಪಿದ ಉದ್ಯೋಗಸ್ಥ ಮಹಿಳೆಯರಂತೆಯೇ, ಓದುವ ಅವಕಾಶವೂ ಇಲ್ಲದೆ ತಾವೆಂದಾದರೂ ಉದ್ಯೋಗಸ್ಥರಾಗಬಹುದೆಂದು ಕನಸಿನಲ್ಲೂ ನೆನಸದಿದ್ದರೂ ಇಂದು ಉದ್ಯೋಗಸ್ಥರಾದ ಮಹಿಳೆಯರೂ ಇದ್ದಾರೆ. ಅಂಥಾ ಇಬ್ಬರು ವಿಭಿನ್ನ ಹಿನ್ನೆಲೆಯ ಮಹಿಳೆಯರನ್ನು ಇಲ್ಲಿ " ಅಚಲ " ಪರಿಚಯಿಸುತ್ತದೆ.

ಲಲಿತಾ ಚಂದ್ರಮೌಳಿ

ಲಲಿತಾ ಹುಟ್ಟಿದ್ದು ಶೃಂಗೇರಿಯಿಂದ ಎರಡು ಮೈಲಿ ದೂರದಲ್ಲಿರುವ ಒಂದು ಪುಟ್ಟ ಹಳ್ಳಿ 'ಹೊಸಕೆರೆ'ಯಲ್ಲಿ. ತಾಯಿ–ತಂದೆ ಓದಿದವರಲ್ಲ. ಉಂಡುಡಲು ವಿಪುಲವಿದ್ದ ಹೊಲ–ಜಮೀನು, ದೊಡ್ಡ ಅಂಕಣದ ಮನೆಯ ತುಂಬಾ ಮಕ್ಕಳು. ಹನ್ನೆರಡು ಮಕ್ಕಳ ನಡುವೆ ಹುಟ್ಟಿ ಬೆಳೆದ ಲಲಿತಾ ವಿಶೇಷವನ್ನೇನೂ ಕಂಡವರಲ್ಲ. ಮೂರನೇ ಕ್ಲಾಸ್‌ಗೇ ಶಾಲೆ ಬಿಟ್ಟ ಅಕ್ಕಂದಿರು. ಒಂದಿಷ್ಟು ಓದುವ ಉತ್ಸಾಹವಿದ್ದ ಲಲಿತಾ ಪ್ರಯಾಸದಿಂದ ಆರನೇ ತರಗತಿ ತಲುಪಿದರು. 'ಹೆಣ್ಣು ಮಕ್ಕಳಿಗೆಂಥಾ ಓದು' ಎಂಬ ಕಾಲ–ಪರಿಸರ. ಲಲಿತಾರ ಓದು ಆರನೇ ತರಗತಿಗೇ ನಿಂತಿತು. ಹೊಸಲಾಚಿನ ಪ್ರಪಂಚ ಕಾಣದ, ಸಣ್ಣ ಹಳ್ಳಿಯ ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಈ ಹುಡುಗಿಗೆ, ಹತ್ತೊಂಬತ್ತಕ್ಕೆ ವಿವಾಹವಾಯಿತು. ಪತಿ ಚಂದ್ರಮೌಳಿಗೆ ಬೆಂಗಳೂರಿನಲ್ಲಿ ಬ್ಯಾಂಕ್ ಉದ್ಯೋಗ. ಆತನ ತಂದೆ ಶೃಂಗೇರಿಯ ದೊಡ್ಡ ಜೋಯಿಸರು. ಇಬ್ಬರು ತಂಗಿಯರು ಒಬ್ಬ ತಮ್ಮ, ತಾಯಿ ಸತ್ತ ಮಕ್ಕಳು, ತಂದೆ ಮರುವಿವಾಹವಾಗಿದ್ದರು.

ಲಲಿತಾ ವಿವಾಹವಾಗಿ ಬೆಂಗಳೂರು ಸೇರಿದರು. ವಿದ್ಯಾವಂತ ಸ್ಫುರದ್ರೂಪಿ ಗಂಡ. ಒಳ್ಳೆಯ ಬ್ಯಾಂಕ್ ನೌಕರಿ. ಆಕೆಯ ಕನಸುಗಳನ್ನೆಲ್ಲ ವಾಸ್ತವದಂತೆ ಕಂಡ ಹೊತ್ತು, ನವವಧುವಾಗಿ ಒಂದು ವರ್ಷ ಕಳೆದಿತ್ತು ಅಷ್ಟೆ. ಮಾವನವರು ತೀರಿಕೊಂಡರು. ಸ್ವಂತ ಮಕ್ಕಳಿಲ್ಲದ ಚಿಕ್ಕಮ್ಮ ವೈಧವ್ಯದ ಭಾರ ಹೊತ್ತು ತಮ್ಮ ತೌರು

ಸೇರಿದರು. ಬೆಂಗಳೂರಿನಲ್ಲಿದ್ದ ಅಣ್ಣನಿಗೆ ತಬ್ಬಲಿಯಾಗಿ ನಿಂತ ತಮ್ಮ, ತಂಗಿಯರ ಚಿಂತೆ. ಶಾಲಾ-ಕಾಲೇಜುಗಳಲ್ಲಿ ಓದುತ್ತಿರುವ ಅವರಿಗೆ ತೊಂದರೆಯಾಗಬಹುದೆಂದು ನೋಡಿಕೊಳ್ಳಲು, ಮಾಡಿಹಾಕಲು ಪತ್ನಿಯನ್ನು ಶೃಂಗೇರಿಗೆ ಕಳುಹಿಸಿದ. ಮದುವೆಯ ಮರುವರ್ಷವೇ ಪತಿಯನ್ನಗಲಿ ಹಳ್ಳಿಗೆ ಹಿಂತಿರುಗಿದ ಲಲಿತಾ ತನ್ನೆತ್ತರಕ್ಕೂ ಬೆಳೆದ ನಾದಿನಿಯರಿಗೆ, ಮೈದುನನಿಗೆ ತಾಯಿಯಾಗಿ ನಿಂತರು. ಪರಿಸ್ಥಿತಿಯ ಒತ್ತಡ ಇಪ್ಪತ್ತಕ್ಕೇ ಅವರ ಹೆಗಲ ಮೇಲೆ ಹಿರಿತನ ತಾಯ್ತನದ ಭಾರವನ್ನು ಬಲವಂತವಾಗಿ ಹೇರಿತ್ತು. ಮತ್ತೊಂದು ವರ್ಷಕ್ಕೆ ಶೃಂಗೇರಿಯ ಹತ್ತಿರದ ಕೊಪ್ಪಕ್ಕೆ ಚಂದ್ರಮೌಳಿಗೆ ವರ್ಗವಾಯಿತು. ವೈಯಕ್ತಿಕ ನೋವುಗಳ ನಡುವೆಯೂ ಬದುಕು ಒಂದಿಷ್ಟು ವ್ಯವಸ್ಥಿತ ಹಾದಿಯಲ್ಲಿ ಸಾಗಿತ್ತು ಇದೀಗ ತಂದೆಯವರು ಸಾಲವಾಗಿ ಕೊಟ್ಟ 25,000 ರೂಗಳ ವಸೂಲಿಗೆ ಚಂದ್ರಮೌಳಿ ಕೋರ್ಟು ಕಛೇರಿ ಸುತ್ತತೊಡಗಿದರು. ಕೋರ್ಟು ಕಛೇರಿಗಳ ಓಡಾಟದಲ್ಲಿ ಒಂದು ದಿನ ಇದ್ದಕ್ಕಿದ್ದಂತೆ ಕೆಲಸಕ್ಕೆ ಹೋಗುವುದನ್ನೇ ನಿಲ್ಲಿಸಿ ಬಿಟ್ಟರು. ಮುಂದೆಂದೋ ಕಡೆಗೂ ಹಣ ಕೈಸೇರಿದ್ದು ಕೇವಲ 15,000 ದ ಮೊತ್ತ ಮಾತ್ರ. ಆದಾಗಲೇ ಚಂದ್ರಮೌಳಿ ಕೆಲಸಕ್ಕೆ ಹೋಗದೆ ಎರಡು ವರ್ಷಗಳ ಮೇಲಾಗಿತ್ತು ಜೀವವಿಮೆಯ ಕಂತುಗಳ ಕಟ್ಟುವುದು ಎಂದೋ ನಿಂತಿತ್ತು. ಸ್ನೇಹಿತರ, ಅಖಂಡ ಪ್ರಯತ್ನದ ನಂತರ ಚಂದ್ರಮೌಳಿಯನ್ನು ಮತ್ತೆ ನೌಕರಿಗೆ ತೆಗೆದುಕೊಂಡರು. ಇದೀಗ ಉತ್ತರ ಕರ್ನಾಟಕದ ಕಾರವಾರಕ್ಕೆ ವರ್ಗ. ಆದಾಗಲೇ ಮೊದಲ ಮಗಳು ಶಿಲ್ಪ ಜನಿಸಿದ್ದಳು. ಯೌವನದಲ್ಲಿ ಕಂಡ ನೂರು ಕನಸುಗಳು ವಾಸ್ತವದ ಬಿಸಿಗೆ ಬಣ್ಣ ಕಳೆದುಕೊಂಡಿದ್ದರೂ ಮತ್ತೆ ಹಳಿ ಹತ್ತಿದ ಬದುಕಿನ ಬಗ್ಗೆ ಒಂದಿಷ್ಟು ಸಮಾಧಾನ. ಬ್ಯಾಂಕ್ ನೌಕರಿ ಚೆನ್ನಿತ್ತು. ಪತಿಗೊಂದಿಷ್ಟು ಜವಾಬ್ದಾರಿ ಇರಬೇಕಿತ್ತು ಎಂದು ಬಯಸಿದ್ದೆಷ್ಟೋ ಬಾರಿ ನಾಲ್ವರಂತೆ ಮನೆ-ಮಠ ಅಷ್ಟೈಶ್ವರ್ಯಗಳೆಲ್ಲ ಬದುಕಿನ ಅವಶ್ಯಕತೆಗಳ ಅನುಕೂಲಗಳ ಕೂಡಿಸಿಕೊಳ್ಳುವ ಬಯಕೆ. ಅವೊಂದು ಅಷ್ಟು ಸುಲಭವಾಗಿ ಸಂಭವಿಸಲಿರಲಿಲ್ಲ. ಆದೀಗ ಅಂಟಿದ ಕುಡಿತದ ಚಟ ಚಂದ್ರಮೌಳಿಯ ಹಣ ಗಬಳಿಸಿತು. ಮಧ್ಯೆ ಬಿಟ್ಟ ಜೀವವಿಮೆಯ ಕಂತು ಕಟ್ಟಲು ನೆನಪಿಸಿದ್ದೆಷ್ಟೋ ಬಾರಿ 'ಕಟ್ಟಿ' ಎಂದು ಒತ್ತಾಯಿಸಿದಾಗಲೆಲ್ಲಾ 'ನಾನೇನು ಸತ್ತುಹೋಗಲ್ಲ, ಗಟ್ಟಿ ಇದ್ದೇನೆ ನಿನಗೇಕೆ ಚಿಂತೆ ?' ಎಂಬ ಗದರಿಕೆ. ಲಲಿತಾಗೆ ಆತನ ಸಾವಿನ ಬಗ್ಗೆ ಸಣ್ಣ ಅನುಮಾನವೂ ಇರಲಿಲ್ಲ. ಇನ್ನು ಮೂವತ್ತು ಮುಟ್ಟದ ಕಟ್ಟುಮಸ್ತಾದ ಗಂಡ. ಸಾವು ಸಾವಿರ ಮೈಲಿ ದೂರವಿದ್ದಂತೆ ಕಂಡ ಕಾಲ. ಪಟ್ಟಣದ ಗಡಿಬಿಡಿಯ ವೇಗದ–ಅಪಘಾತಗಳ ವಾತಾವರಣವಲ್ಲ. ಪ್ರಕೃತಿಯ ಗರ್ಭದಲ್ಲಿ ತಣ್ಣಗೆ ಮಲಗಿದ ಪುಟ್ಟ ಊರು ಕಾರವಾರ. ಲಲಿತೆಯದು ಒಂದೇ ಚಿಂತೆ 'ಒಂದಿಷ್ಟು ಉಳಿತಾಯವಾದರೂ ಆಗಲಿ' ಎಂಬುದು. ಆಗಲೇ ಎರಡನೇಯ ಮಗಳು ಶೃತಿ ಹುಟ್ಟಿದ್ದಳು. ಮಕ್ಕಳ ಭವಿಷ್ಯಕ್ಕಿಷ್ಟು ಉಳಿಸಲಿ ಎಂಬ ಆಸೆ.

ಸಾವಿರ ದೂರವಿದ್ದ ಸಾವು ಏಕಾಏಕಿ ಹತ್ತಿರವಾಯಿತು. ಬಾಗಿಲ ತಟ್ಟದೆಯೇ ಒಳನುಗ್ಗಿ ಆಕ್ರಮಿಸಿತು ಒಂದು ದಿನ ಇದ್ದಕ್ಕಿದ್ದಂತೆ. ವಿಪರೀತ ಹೊಟ್ಟೆ ನೋವಿನಿಂದ ನರಳಿದ ಚಂದ್ರಮೌಳಿ ಕಾರವಾರದ 'ನರ್ಸಿಂಗ್ ಹೋಮ್' ಒಂದರಲ್ಲಿ ದಾಖಲಾದರು. ಹಲವಾರು ಎಕ್ಸ್-ರೇಗಳ ನಂತರ ಹೊಟ್ಟೆಯ ಅಲ್ಸರ್ ಎಂದು ಗುರುತಿಸಲಾಯಿತು. ತಕ್ಷಣ ಮಣಿಪಾಲ್ ಆಸ್ಪತ್ರೆಗೆ ಕೊಂಡೊಯ್ಯಲು ತಿಳಿಸಿದರು. ಐದು ವರ್ಷದ ಶಿಲ್ಪಳನ್ನು ಸ್ನೇಹಿತರ ಮನೆಯಲ್ಲುಳಿಸಿ, ಒಂದು ವರ್ಷದ ಕೈ ಕೂಸಿನೊಂದಿಗೆ ಮಣಿಪಾಲ್ ಆಸ್ಪತ್ರೆ ತಲುಪಿದರು. ತಕ್ಷಣ ಆಪರೇಷನ್ ಜರುಗಿತ್ತು. ಆರು ಗಂಟೆಗಳಿಗೆಲ್ಲಾ ಪ್ರಜ್ಞೆ ಬಂದಿತು. ಜೀವ ಉಳಿದ ಹುಸಿ ನಂಬಿಕೆಯ ಹುಟ್ಟಿಸಿತ್ತು. ಚಂದ್ರಮೌಳಿ ಪೂರಾ ಪ್ರಜ್ಞೆಯಲ್ಲಿದ್ದರು ಮಾತನಾಡಿದರು, ಆದರೆ ಆರನೇ ದಿನ ರಾತ್ರಿ ಮಲಗಿದರು ಮತ್ತೆ ಏಳಲಿಲ್ಲ. ಧುತ್ತನೆ ಲಲಿತಾರ ಎದುರಿಗೆ ಸಾವು ಎಲ್ಲವನ್ನು ಗಬಳಿಸಿ ನಿಂತಿತ್ತು. ಇಂತಹ ಸಾಧ್ಯತೆಗೆ ತಯಾರಿಲ್ಲದ

ಲಲಿತಾ ಪೂರ್ಣ ಜರ್ಜರಿತರಾದರು. ಸಣ್ಣ ಹಳ್ಳಿಯಲ್ಲಿ ಬೆಳೆದಾಕೆ, ಸಣ್ಣ ಹಳ್ಳಿಯಲ್ಲೇ ವಾಸ, ಆರನೇ ತರಗತಿ ಕಂಡವರು, ತಮ್ಮ ಬದುಕಿನಲ್ಲೆಂದಾದರೂ ತಾವು ಉದ್ಯೋಗಸ್ಥರಾಗಬೇಕಾಗಬಹುದೆಂದು ಕನಸಿನಲ್ಲೂ ಚಿಂತಿಸಿದವರಲ್ಲ. ಇದೀಗ ಎರಡು ಎಳೆಯ ಮಕ್ಕಳೊಂದಿಗೆ ಗಂಡನ ಕಳಕೊಂಡು, ಖಾಲಿ ಭವಿಷ್ಯವ ಎದುರಿಗಿಟ್ಟು-ಕೊಂಡು ಆಘಾತದಲ್ಲಿ ನಿಂತಿದ್ದರು. ಕೈಯಲ್ಲಿ ಹಣವಿಲ್ಲ, ಮಧ್ಯೆ ಎರಡು ವರ್ಷ ಪತಿ ಕೆಲಸಕ್ಕೆ ಹೋಗಿರಲಿಲ್ಲ, ಸೈಟು ಮನೆ ಏನೇನೂ ಮಾಡಿರಲಿಲ್ಲ. ಜೀವವಿಮಾ ಕೂಡಾ ಬರುವಂತಿರಲಿಲ್ಲ. ಬ್ಯಾಂಕಿನಿಂದ ಬಂದ 60 ಸಾವಿ-ರಗಳ ಮುಷ್ಟಿಯಲ್ಲಿಡಿದು ಹೊಸ ಬದುಕು ಪ್ರಾರಂಭಿಸ-ಬೇಕಿತ್ತು ಮತ್ತೆ ತಾಯ್ತಂದೆಯರ, ಸಂಬಂಧಿಕರ ಆಸರೆಗೆ, ಆಶ್ರಯಕ್ಕೆ ಹೋಗಲು ಇಚ್ಛಿಸಲಿಲ್ಲ. ಮತ್ತೆ ಅವಲಂಬಿತ ಬದುಕಿನ ಅಭದ್ರತೆಗಳಿಗೆ ತಮ್ಮ ಬದುಕನ್ನು, ಮಕ್ಕಳ ಭವಿಷ್ಯವನ್ನು ದೂಡುವುದು ಬೇಕಿರಲಿಲ್ಲ. ತಮ್ಮಿಂದ ಸಾಧ್ಯವೇ ಇಲ್ಲ ಎಂದುಕೊಂಡಿದ್ದ ನೌಕರಿಯ ಹಾದಿ-ಯೊಂದೇ ಬೆಳಕು ತೋರಿತು. ಅವರ ವಿದ್ಯಾಭ್ಯಾಸಕ್ಕೆ ಬ್ಯಾಂಕ್‌ನಲ್ಲಿ ಅಟೆಂಡರ್ ಹುದ್ದೆ ಮಾತ್ರ ಸಿಗಲಿತ್ತು. ಒಂದಿಷ್ಟು ಓದಿ ನಂತರ ಗುಮಾಸ್ತಗಿರಿಗೆ ಸೇರಲು ಸಮಯವಿರಲಿಲ್ಲ. ಮಕ್ಕಳನ್ನು ಎಲ್ಲಿ ಬಿಡುವುದು ? ಓದಿ ಬಂದರೂ, ನಿಯಮಾವಳಿಗಳೇ ಬದಲಾಗಿ ಈಗ ಸಿಗಬಲ್ಲ ನೌಕರಿಯೂ ಕೈ ಬಿಟ್ಟರೆ ಗತಿಯೇನು ? ಅವರೆದುರು ಬಹಳಷ್ಟು ಆಯ್ಕೆಗಳಿರಲಿಲ್ಲ. ಅತ್ಯಂತ ಕಠಿಣ ನಿರ್ಧಾರ ಒಂದು ದಿನ ಬ್ಯಾಂಕ್ ಕಾಣದ, ಚೆಕ್-ಚಲನ್ ಎಂದರೇನು ಗೊತ್ತಿರದ ಪುಟ್ಟ ಊರಿನ ಹೊಸಿಲುದಾಟದ ಗೃಹಿಣಿ ಲಲಿತಾ ನೌಕರಿ ಕೇಳಿ ಅರ್ಜಿ ಹಾಕಿದರು. ಬೆಂಗಳೂರು ಸೇರಿದರು ಬ್ಯಾಂಕಿನ ಜಯನಗರದ ದೊಡ್ಡ ಶಾಖೆಯಲ್ಲಿ ಅಟೆಂಡರ್ ಆಗಿ ರಿಪೋರ್ಟ್ ಮಾಡಿಕೊಂಡರು. ಹೆಚ್ಚು ಓದಿಲ್ಲದ ತಾನು ಕೆಲಸ ನಿಭಾಯಿಸಬಲ್ಲೆನೆ, ಇಂಗ್ಲೀಷಿನಲ್ಲೆ ಮಾತನಾಡಿಸಿದರೇನು ಮಾಡುವುದು, ಎಸ್.ಬಿ. ಚೆಕ್ ಎಂದರೇನು, ಬ್ಯಾಂಕ್ ರೆಮಿಟೆನ್ಸ್ ಮಾಡುವುದ್ಹೆಗೆ ಅವರೊಳಗಿನ ಇಂಥಾ ನೂರು ಭೀತಿಗಳ ಮೆಟ್ಟಿ ಅವರು ನಿಂತದ್ದು, ಮತ್ತೆಂದೂ ಅವಲಂಬನೆಯ ಹಾದಿ ಬೇಡ ವೆಂಬ ಗಟ್ಟಿ ನಿರ್ಧಾರದ ಬಲದಿಂದ, ತನ್ನ ಮಕ್ಕಳ ಬದುಕು ಮತ್ತ್ಯಾರದೋ ಆಶ್ರಯದಲ್ಲಿ ಕುಂದಬಾರದೆಂಬ ದೂರಾಲೋಚನೆಯಿಂದ.

ಒಮ್ಮೆ ಹೆಜ್ಜೆ ಇಟ್ಟ ಸ್ವಾವಲಂಬನೆಯ ಹಾದಿ ಅವರು ಊಹಿಸಿದಷ್ಟು ಕಠಿಣವಿರಲಿಲ್ಲ. ಬ್ಯಾಂಕ್ ಜನರ ಸ್ನೇಹ ಸಹೃದಯತೆ ಅವರ ಅರ್ಧ ಭಯ ನಿವಾರಿಸಿತು. ಮೆಲ್ಲನೆ ಕೆಲಸವನ್ನೆಲ್ಲ ಕಲಿತರು. ಒಂದೆರಡು ಬಾರಿ ತಟ್ಟನೆ ಚಿಮ್ಮಿದ ಕಣ್ಣೀರನ್ನು ಗೆದ್ದರು. ಹೊರಗೂ ಹೋಗಿ ಪೋಸ್ಟ್ ಆಫೀಸ್, ರೆಮಿಟನ್ಸ್ ಎಲ್ಲಾ ಮಾಡಿ ಬರುವಷ್ಟು ಧೈರ್ಯ-ಆತ್ಮವಿಶ್ವಾಸ ಮೂಡಿತು.

ಇದೀಗ ಈ ಆತ್ಮವಿಶ್ವಾಸದ ಹಾದಿಯಲ್ಲಿ ಏಳು ವರ್ಷ ಕಳೆದಿದೆ ಕೆಲಸದಲ್ಲಿ ನುರಿತ ಜೀವ. ಹದಿಮೂರು ವರ್ಷದ ಶಿಲ್ಪ, ಎಂಟು ವರ್ಷದ ಶ್ರುತಿ ಬುದ್ಧಿವಂತಳಾಗಿ ಬೆಳೆದಿದ್ದಾರೆ ಶಾಲೆಯಲ್ಲಿ ಒಳ್ಳೆ ಅಂಕಗಳ ಪಡೆದಿದ್ದಾರೆ. ತಮ್ಮ ಬದುಕಿನ ಅವಲಂಬನೆಯ ಕರಿನೆರಳು ತಮ್ಮ ಮಕ್ಕಳ ಹಾದಿಯಲ್ಲಿ ಹಾಯಬಾರದೆಂಬ ತೀವ್ರ ಬಯಕೆ ಲಲಿತಾರವರದು. ಹೆಣ್ಣು ಮಕ್ಕಳು ಬದುಕಿಗೆ ತಯಾರಿರಬೇಕು, ವಿದ್ಯಾವಂತರಾಗಬೇಕು, ತಮ್ಮ ಕಾಲ ಮೇಲೆ ತಾವು ನಿಲ್ಲಬೇಕು -ಕಟು ಅನುಭವದಲ್ಲಿ ಲಲಿತಾ ಕಲಿತ ಪಾಠ ಇದು. ಏಳು ವರ್ಷಗಳಲ್ಲಿ ಬಹಳ ಜತನದಿಂದ ಬದುಕನ್ನು ಲಾಲಿಸಿದ್ದಾರೆ. ಒಳ್ಳೆಯ ಬಡಾವಣೆಯಲ್ಲಿ ಚಿಕ್ಕ ಬಾಡಿಗೆಯ ಮನೆ, ಬದುಕಿಗಷ್ಟು ಅನುಕೂಲಗಳ ಹೊಂದಿಸಿಕೊಂಡಿದ್ದಾರೆ, ಮಕ್ಕಳ ಭವಿಷ್ಯದ ಬಗ್ಗೆಯೂ ಯೋಚಿಸಿದ್ದಾರೆ. ನಗರದ ಹೊರ ಬಡಾವಣೆಯಲ್ಲೊಂದು ಸೈಟ್ ಕೊಂಡಿದ್ದಾರೆ. ಶಾಸ್ತ್ರ ಸಂಪ್ರದಾಯಗಳೊಂದನ್ನೂ ಆಚರಿಸದ ಲಲಿತಾ ದುಡಿ-ಮೆಯ ಮಹತ್ವ ಅರಿತವರು. ಇವರನ್ನು ಕಂಡಾಗ ಅನಿಸುವುದುಂಟು. 'ದುಡಿವ ತಂದೆಯ ಮಕ್ಕಳು ಅನಾಥರಾಗಬಹುದು, ದುಡಿವ ತಾಯಿಯ ಮಕ್ಕಳು ಎಂದೂ ಅನಾಥರಾಗರು'.

ರೀನಾ ರಾಮಚಂದ್ರನ್

WIPS (Women in the Public Sector)ನ ಕ್ರಿಯಾಶೀಲ ಸದಸ್ಯರಾದ ರೀನಾ ರಾಮಚಂದ್ರನ್‌ರನ್ನು ಕುರಿತಂತೆ ಅನೇಕ ಲೇಖನಗಳನ್ನು-ಸಂದರ್ಶನಗಳು ಆಂಗ್ಲ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವುಗಳ ಮೂಲಕ ಅವರ ಬದುಕಿನ ಒಂದು ಅದ್ಭುತ ಚಿತ್ರ ದೊರೆಯುತ್ತದೆ.

ರೀನಾ ಹುಟ್ಟಿ ಬೆಳೆದದ್ದು ಮೂರು ಜನ ಅಕ್ಕ-ತಂಗಿಯರ ನಡುವೆ. ಬಾಲ್ಯದ ಹೆಚ್ಚು ಕಾಲ ಡೆಹ್ರಾಡೂನ್ ಮತ್ತು ಕಾನಪುರದಲ್ಲಿ ಕಳೆಯಿತು. ನಾಲ್ಕು ಜನ ಹೆಣ್ಣು ಮಕ್ಕಳ ಹೆತ್ತ ಆಕೆಯ ತಾಯಿ-ತಂದೆಯರು ಎಂದೂ ಗಂಡು ಮಗನಿಗಾಗಿ ಹಂಬಲಿಸಿದವರಲ್ಲ. ಅತ್ಯಂತ ಅಕ್ಕರೆಯಿಂದ ತಮ್ಮ ಹೆಣ್ಣು ಮಕ್ಕಳ ಬೆಳೆಸಿದರು. ಆಕೆಯ ತಾಯಿ ವಿವಾಹವಾದಾಗ ಕೇವಲ ಎಂಟನೇ ತರಗತಿ ಪಾಸ್ ಮಾಡಿದ್ದರು. ಮದುವೆಯಾದೊಡನೆ ತಂದೆ ಆಕೆಯನ್ನು ಮತ್ತೆ ಶಾಲೆಗೆ ಕಳುಹಿಸಿದರು. ಆಕೆ ಬಿ.ಎ. ಮುಗಿಸಿ ಡಬಲ್ ಎಂ.ಎ. ಪಡೆದು, ಶಾಲಾ ಟೀಚರ್ ಆಗಿ ವೃತ್ತಿ ಪ್ರಾರಂಭಿಸಿ, ವಿಶ್ವವಿದ್ಯಾಲಯದ ರೀಡರ್ ಆಗಿ ನಿವೃತ್ತರಾದರು. ಇಂಥಾ ಪ್ರಜ್ಞಾವಂತ ತಾಯ್ತಂದೆಯರ ನೆರಳಲ್ಲಿ ಬೆಳೆದ ರೀನಾ ಆರ್ಥಿಕ ಸ್ವಾವಲಂಬನೆಯನ್ನು ಬದುಕಿನ ಬಹುದೊಡ್ಡ ಗುರಿಯೆಂದು ಪರಿಗಣಿಸಿದ್ದರೆ ಆಶ್ಚರಿಯಿಲ್ಲ.

ಹತ್ತೊಂಬತ್ತನೇ ವಯಸ್ಸಿಗೆ ರೀನಾಗೆ ವಿವಾಹವಾಯಿತು. ಆಕೆ ಆಗಷ್ಟೇ ಪದವೀಧರರಾಗಿದ್ದರು. ಅವರ ಒಪ್ಪಿಗೆಯ ಪಡೆದೇ ಹಿರಿಯರು ಅವರ ವಿವಾಹವನ್ನು ರೈಲ್ವೆಸ್‌ನಲ್ಲಿ ಎಕ್ಸಕ್ಯುಟಿವ್ ಇಂಜೀನಿಯರ್ ಆಗಿ ಕೆಲಸ ಮಾಡುತ್ತಿದ್ದ ಆರ್. ಸಿ. ಅಯ್ಯರ್ ಅವರ ಜೊತೆಗೆ ನೆರವೇರಿಸಿದರು. ರೀನಾ ತಮ್ಮ ವಿವಾಹದಲ್ಲಿ ಆಡಂಬರದ ಆಚರಣೆಗಳ ಬಯಸಲಿಲ್ಲ. ಅವಶ್ಯವಿದ್ದಷ್ಟೆ ವೆಚ್ಚಮಾಡಿ ಸರಳವಾಗಿ ವಿವಾಹವಾದರು. ವಿವಾಹ ಬದುಕಿನ ಒಂದು ಸಹಜ ಘಟ್ಟ ಎಂದಷ್ಟೇ ಭಾವಿಸಿದ್ದ ರೀನಾ ವಿವಾಹವಾಯಿತೆಂದು ವಿದ್ಯಾಭ್ಯಾಸ ನಿಲ್ಲಿಸಿದವರಲ್ಲ. ಎಂಥ ಅಡಚಣೆಗಳು ಎದುರು ಬಿದ್ದರೂ ತಮ್ಮ ಗುರಿ ಸಾಧಿಸುವ ಛಲವಿದ್ದ ಹೆಣ್ಣು ರೀನಾ. ವಿವಾಹದ ನಂತರ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಪಿ.ಎಚ್.ಡಿ. ಗೆ ದಾಖಲಾದರು. ಕೆಲಸಕ್ಕೆ ಸೇರಿದರು. ಆಗಲೇ ಮೊದಲ ಮಗನ ಜನನ. ತಾಯ್ತನ ಖುಷಿ ನೀಡಿತ್ತು ಆದರೆ ಕಟ್ಟಿಹಾಕಲಿಲ್ಲ ರೀನಾ ವಿವಾಹ-ಮಾತೃತ್ವವನ್ನು ಬದುಕಿನ ಸಹಜ ಅಂಗಗಳಾಗಿ ಭಾವಿಸಿದ್ದರೇ ಹೊರತು ಸಾಧನೆಗಳೆಂದಾಗಲೀ–ಅಡಚಣೆಗಳೆಂದಾಗಲೀ ಯೋಚಿಸಿದವರಲ್ಲ. ತಾಯಾದೊಡನೆ ಹೆಂಗಸರು ಕೆಲಸ ಬಿಟ್ಟು ಕೂರುವ ಬಗ್ಗೆ ಬಹಳ ಖೇದ ವ್ಯಕ್ತ ಪಡಿಸುತ್ತಾರೆ. ನಿಜ ತಾಯ್ತನದ ಜವಾಬ್ದಾರಿಗಳಿವೆ. ಆದರೆ ಒಂದಿಷ್ಟು ಹೊಂದಾಣಿಕೆ, ಪರಿಶ್ರಮ ಸರಿಯಾದ ನಿರ್ವಹಣೆಯಿಂದ ಎಲ್ಲವನ್ನು ಯಶಸ್ವಿಯಾಗಿ ನಿಭಾಯಿಸಬಹುದೆಂಬ ಆತ್ಮವಿಶ್ವಾಸ ಅವರದು. ಐದು ವರ್ಷಗಳ ನಂತರ ಎರಡನೇ ಮಗನ ಆಗಮನ. ಅಷ್ಟರಲ್ಲಿ ಅವರ ಪಿ.ಎಚ್.ಡಿ. ಮುಗಿದಿತ್ತು. ಆಗಷ್ಟೇ ಫ್ರೆಂಚ್ ಸರಕಾರದ ಸ್ಕಾಲರ್‌ಷಿಪ್ ಒಂದು ಅವರಿಗೆ ದೊರೆಯಿತು, ಅದು ರಸಾಯನಶಾಸ್ತ್ರದಲ್ಲಿ ವಿಶೇಷ ತರಪೇತಿಯ ಅದ್ಭುತ ಅವಕಾಶವಾಗಿತ್ತು. ಮೂರು ತಿಂಗಳ ಮಗುವನ್ನು ಗಂಡ-ತಾಯಿಯರಿಗೆ ಒಪ್ಪಿಸಿ ಮೂರು ವರ್ಷ ಫ್ರಾನ್ಸ್‌ಗೆ ಉನ್ನತ ವ್ಯಾಸಂಗ ಮಾಡಲು ಹೋದರು. ಫ್ರೆಂಚ್ ಭಾಷೆಯಲ್ಲಿ ಥೀಸಿಸ್ ಬರೆದರು. ಈ ಎಲ್ಲ ವೃತ್ತಿ ಜೀವನದ ನಡುವೆ ಅವರು ಭರತನಾಟ್ಯ–ಒಡಿಸ್ಸಿಗಳ ಅಭ್ಯಾಸವನ್ನೂ ಮುಂದುವರೆಸಿದ್ದರು. ಹಲವಾರು ಬಾರಿ ನೃತ್ಯ ಪ್ರದರ್ಶನವನ್ನು ನೀಡಿದರು.

ಮಗುವನ್ನು ಬಿಟ್ಟು ಬಂದ ಬಗ್ಗೆ ರೀನಾ ಎಂದೂ ತಮ್ಮ ಮನಸ್ಸಿನಲ್ಲಿ ಅಪರಾಧಿ ಪ್ರಜ್ಞೆಗೆ ಸ್ಥಳ ನೀಡಲಿಲ್ಲ. ತಾವು ಒಳ್ಳೆಯ ತಾಯಿಯೆ ? ಎಂಬ ಅನುಮಾನಗಳೊಂದೂ ಅವರನ್ನು ಕಾಡಲಿಲ್ಲ. ಸಮಾಜದ ಸಾಮಾನ್ಯ ಸವಾಲುಗಳ, ಪೂರ್ವಗ್ರಹಗಳ ತಳ್ಳಿಹಾಕಿದರು. ಮಕ್ಕಳ

ಪಾಲನೆಯ ಜವಾಬ್ದಾರಿ ತಂದೆ-ತಾಯಿ ಇಬ್ಬರಿಗೂ ಸೇರಿದ್ದು ಎಂದು ನಂಬಿದ ರೀನಾ ಪತಿಯ ಪೂರ್ಣ ಸಹಕಾರವ ಪಡೆದರು, ತಮ್ಮ ನೌಕರಿಯಲ್ಲಿ ಅತ್ಯಂತ ಶ್ರದ್ಧೆಯಿಂದ ಮುಂದುವರೆದರು. ತಾಯ್ತನದ ಜವಾಬ್ದಾರಿ ಯನ್ನು ನಿಭಾಯಿಸಿದರು. ಮಕ್ಕಳಿಗೆ ಹೊರೆಹೊರೆ ಮಾಡಿ ಉಣಿಸಿದರೇ ಮಾತೃತ್ವ ಎಂದು ನಂಬಿದವರಲ್ಲ. ಇತರ ತಾಯಂದಿರಂತೆ ಮನೆಯಲ್ಲಿರದ ತಮ್ಮ ಪರಿಸ್ಥಿತಿಯನ್ನು ಮಕ್ಕಳಿಗೆ ಅರ್ಥವಾಗುವಂತೆ ವಿವರಿಸಿದರು, ಮಕ್ಕಳು ತಾಯಿಯ ದುಡಿಮೆಯನ್ನು ಗೌರವಿಸುತ್ತಾ ಸ್ವತಂತ್ರರಾಗಿ, ಸ್ವಾವಲಂಬಿಗಳಾಗಿ ಬೆಳೆದರು. ಅಡಿಗೆ-ಹೊಲಿಗೆ-ಮನೆಗೆಲಸ ಎಲ್ಲದರಲ್ಲೂ ನೆರವಾದರು. ಸ್ತ್ರೀಯರ ಬಗ್ಗೆ ಅತ್ಯಂತ ಗೌರವವಿದ್ದು ಸ್ತ್ರೀಯರ ಉದ್ಯೋಗ ತಮ್ಮ ಉದ್ಯೋಗದಷ್ಟೇ ಅಮೂಲ್ಯವೆಂಬ ಹಿರಿಯ ಚಿಂತನೆಗಳೊಂದಿಗೆ ಬೆಳೆದ ತನ್ನ ಇಬ್ಬರು ಮಕ್ಕಳು ನಾಳೆ ಒಳ್ಳೆಯ ಗಂಡಂದಿರಾಗುವರೆಂಬ ಭರವಸೆ ಇರುವ ರೀನಾ ಇದಕ್ಕಿಂತ ಒಬ್ಬ ಒಳ್ಳೆ ತಾಯಿ ಮತ್ತೇನು ಮಾಡಬೇಕಿದೆ ಎಂದು ಪ್ರಶ್ನಿಸುತ್ತಾರೆ, ವರದಕ್ಷಿಣೆ - ವಧುದಹನಗಳು 'ಗಂಡು ಮಕ್ಕಳು ಶ್ರೇಷ್ಠ' ವೆಂದು ತಮ್ಮ ಮಕ್ಕಳ ತಲೆಗೆ ತುರುಕುವ ತಾಯಂದಿರಿಂದಲೇ ಮುಂದುವರೆಯುತ್ತಿವೆಯೆಂದು ಅವರ ಅಭಿಪ್ರಾಯ.

ರೀನಾರವರು ಆಯ್ದ ವೃತ್ತಿರಂಗದಲ್ಲಿ ಆಕೆ ಹೋದಲ್ಲೆಲ್ಲಾ ಹೆಣ್ಣು ಅಲ್ಪ ಸಂಖ್ಯಾತಳೇ. 'ರೀನಾ ಮಿನಿಸ್ಟ್ರಿ ಆಫ್ ಸಯನ್ಸ್ ಎಂಡ್ ಟೆಕ್ನಾಲಜಿ' ಗೆ ಕೆಲಸ ಮಾಡಿದರು. 1982ರಲ್ಲಿ ONGC ಗೆ ಸೇರಿ ಇದೀಗ, 'ಜನರಲ್ ಮ್ಯಾನೇಜರ್' ಆಗಿರುವ ರೀನಾ, 'ಹೆಣ್ಣಿಗೆ ತನ್ನ ಯೋಗ್ಯತೆಯನ್ನು ಸಾಬಿತು ಪಡಿಸುವ ಅವಶ್ಯಕತೆ ಇದೆ. ಕಡಿಮೆ ಸಂಖ್ಯೆಯಲ್ಲಿರುವ ಕಾರಣ, ಸ್ತ್ರೀಯರು ಉನ್ನತ ಪದವಿ ತಲುಪಲು ಪುರುಷರಿಗಿಂತ ಹೆಚ್ಚು, ಪರಿಶ್ರಮ ಪಡಬೇಕೆಂಬುದು ನಿಜ' ಎನ್ನುತ್ತಾರೆ. ಹೆಂಗಸರು ಯಾವ ರಿಯಾಯತಿಯನ್ನೂ ಬಯಸದೆ ತಮ್ಮ ಪೂರ್ಣ ಸಾಮರ್ಥ್ಯದಿಂದ ದುಡಿಯಬೇಕು ಎನ್ನುತ್ತಾರೆ. ಬಹಳಷ್ಟು ಕಟು ಆಯ್ಕೆಗಳಿಗೆ, ಒಂದಿಷ್ಟು ತ್ಯಾಗಕ್ಕೆ ನಿಖರ ನಿರ್ಧಾರಗಳಿಗೆ ಸಿದ್ಧವಿರಬೇಕು ಎಂದೂ ಎಚ್ಚರಿಸುತ್ತಾ ತಮ್ಮ ಬದುಕಿನ ಪ್ರಸಂಗವೊಂದನ್ನು ಉದಾಹರಿಸುತ್ತಾರೆ. ಆಕೆಯ ಮಾವನವರು ಬೆಂಗಳೂರಿನಲ್ಲಿ ನಿಧನರಾದಾಗ ಹಿರಿಯ ಸೊಸೆಯಾಗಿ ಈಕೆ ಅಲ್ಲಿಗೆ ತಕ್ಷಣ ಧಾವಿಸಬೇಕಿತ್ತು. ಆದರೆ ಅದೇ ದಿನ ಡೆಹ್ರಾಡೂನಿನಲ್ಲಿ ಅತಿ ಮುಖ್ಯ 'ಬೋರ್ಡ್ ಮೀಟಿಂಗ್' ಇತ್ತು, ರೀನಾ ಕಟು ನಿರ್ಧಾರ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಮಾವನವರ ಬಗ್ಗೆ ಅತ್ಯಂತ ಗೌರವವಿದ್ದರೂ, ರೀನಾ 'ಮೀಟಿಂಗ್'ಗೆ ಹೋದರು. ಅವರಿಗೆ ತಿಳಿದಿತ್ತು ತಮ್ಮನ್ನು ಮಗಳಂತೆ ಆದರಿಸಿದ್ದ, ವಿದ್ಯಾಭ್ಯಾಸಕ್ಕೆ ಇನ್ನಿಲ್ಲದಂತೆ ಪ್ರೋತ್ಸಾಹಿಸಿದ್ದ ಮಾವ ತಮ್ಮ ಈ ನಿರ್ಧಾರವನ್ನು ಖಂಡಿತಾ ಅರ್ಥಮಾಡಿಕೊಳ್ಳುತ್ತಿದ್ದರೆಂದು. ಅಂತ್ಯಕರ್ಮಗಳಿಗೆಂದು ಹೋದ ಪತಿ ಇನ್ನಿಲ್ಲದಂತೆ ಇತರರ ಕೊಂಕು ಪ್ರಶ್ನೆಗಳ ಎದುರಿಸಿದರೂ ಪತ್ನಿಯನ್ನು ಯಾವ ಕಾರಣಕ್ಕೂ ಬಿಟ್ಟುಕೊಡಲ್ಲಿಲ್ಲ ! ರೀನಾ ಅವರದೇ ಮಾತುಗಳಲ್ಲಿ 'ಆಕೆ ಮಹತ್ವಾಕಾಂಕ್ಷೆ ವ್ಯಕ್ತಿ', ಯಶಸ್ಸಿನ ಏಣಿಯನ್ನು ಸರಸರನೆ ಎರಬಯಸುವವರು. ಹೆಂಗಸರು ಮಕ್ಕಳಾಯಿತೆಂದರೆ ಮಕ್ಕಳ ಹತ್ತಿರವಿರಬೇಕೆಂಬ ಹಂಬಲದಲ್ಲಿ ತಮ್ಮ ಉದ್ಯೋಗವನ್ನು, ಮಹತ್ವಾಕಾಂಕ್ಷೆಗಳನ್ನು ಬಲುಬೇಗ ಬಿಟ್ಟುಕೊಡುತ್ತಾರೆ. ಆದರೆ ಮಕ್ಕಳು ಶಾಲೆಗಳಿಗೆ ಹೊದಂತೆ ದೊಡ್ಡವರಾದಂತೆ, ತಮ್ಮದೇ ಹವ್ಯಾಸಗಳ ಬೆಳೆಸಿಕೊಂಡಂತೇ ಅವರಿಗೆ 24 ಗಂಟೆಯೂ ತಾ ಯಿ ಯ ಅವಶ್ಯಕತೆ ಇರುವುದಿಲ್ಲ. ತಮ್ಮ ಬದುಕನ್ನು ಪೂರಾ ಅನ್ವೇಷಿಸದ ಈ ತಾಯಂದಿರು ತಮ್ಮ ಮುಂದಿನ ಪೀಳಿಗೆಗೆ ಏನು ಕೊಡಬಲ್ಲರೆಂಬ ಅನುಮಾನ ರೀನಾರವರಿಗಿದೆ. 'ಉದ್ಯೋಗ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆಯನ್ನಷ್ಟೇ ಅಲ್ಲ. ಸ್ವತಂತ್ರ ಚಿಂತನೆಗಳನ್ನೂ ಕೊಡುತ್ತದೆ' ಎಂದು ಅವರ ಗಟ್ಟಿ ನಂಬುಗೆ.

ಹೆಣ್ಣು ತನ್ನ ಹೆಣ್ತನವನ್ನು ಬಿಟ್ಟುಕೊಡಬೇಕಿಲ್ಲ ಮತ್ತು ತನ್ನ ಹೆಣ್ತನವನ್ನು ತೊಡಕಾಗಿಸಿಕೊಳ್ಳಬೇಕಿಲ್ಲ. ಸಮಾಜದ ಪೂರ್ವಾಗ್ರಹಗಳೊಡನೆ ಗುದ್ದಾಡುತ್ತಾ ಸಮಯ ಹಾಳು ಮಾಡುವುದು ಬೇಡ. ಈ ಸಮಾಜವನ್ನು ಒಪ್ಪಿಸಲು - ಬದಲಿಸಲು ಕ್ರಿಯೆಯ ಅವಶ್ಯಕತೆಯಿದೆ. ನಿಮ್ಮ ಕೆಲಸ-ಕಾರ್ಯ ನಿಮ್ಮ ನಂಬಿಕೆಗಳ ಪರಮ ಉದಾಹರಣೆಯಾಗಲಿ, ಸಾಮರ್ಥ್ಯವ ಸಾಬೀತು ಮಾಡಲಿ. ಇಂದೂ ನಮ್ಮ ಸಮಾಜ ಹೆಣ್ಣಿಗೆ ತೊಡಿಸಿರುವ ಸಾಂಪ್ರದಾಯದ ಪಾತ್ರಗಳ ಮರೆತುಬಿಡುವುದು ಒಳ್ಳೆಯದು. ಹೆಚ್ಚು ಜನ ಮಹಿಳೆಯರು ಓದುವ ಅವಕಾಶವಿದ್ದರೂ ಹೆಚ್ಚಿನ ಪರಿಶ್ರಮಪಡಲು ಸಿದ್ಧರಿಲ್ಲ. ಮದುವೆ-ಮನೆ-ಮಕ್ಕಳು ಎಂದು ನಿಷ್ಕ್ರಿಯರಾಗಿ, ಮುಂದೆ ಬದುಕಿನ ಅನಿವಾರ್ಯ ತಿರುವುಗಳಲ್ಲಿ ತಟ್ಟನೆ ಅಪ್ರತಿಭರಾಗುತ್ತಾರೆ. ಪ್ರಪಂಚದ ಪ್ರತಿ ಹೆಣ್ಣು ದುಡಿವ ಮಹಿಳೆಯೇ. ಆಫೀಸಿನಲ್ಲಿಲ್ಲದಿದ್ದರೆ, ಮನೆಯಲ್ಲಿ ಹೆಣ್ಣು ದುಡಿಯುತ್ತಾಳೆ. ಹೆಣ್ಣಿನ ಗೃಹಿಣೀ ಪಾತ್ರವನ್ನು ನಿರ್ಲಕ್ಷಿಸದಿದ್ದರೂ, ಪ್ರತಿ ಹೆಣ್ಣು ಹೊರಗೆ ದುಡಿವ ಅವಕಾಶವ ಉಪಯೊಗಿಸಿಕೊಳ್ಳುವ ಅವಶ್ಯಕತೆ ಇದೆ. ಅರ್ಥಿಕ ಸ್ವಾವಲಂಬನೆ ವ್ಯಕ್ತಿಯ ವಿಕಾಸಕ್ಕೆ, ಸ್ವಾತಂತ್ರ್ಯ ಬೆಳವಣಿಗೆಗೆ ಅತಿ ಮುಖ್ಯ ಪ್ರತಿ ಹೆಣ್ಣು ಉದ್ಯೋಗಸ್ಥಳಾಗಬೇಕು. ಉದ್ಯೋಗಸ್ಥ ಮಹಿಳೆ ಬದುಕಿಗೆ ಆಕಸ್ಮಿಕಗಳಿಗೆ ಸಿದ್ಧಳಿರುತ್ತಾಳೆ, ಅಘಾತಗಳು ಎದುರಾದಾಗ ಆಕೆ ತತ್ತರಿಸಲಾರಳು. 'ನನ್ನ ಜೀವನದಲ್ಲಿ ಆರ್ಥಿಕ ಸ್ವಾವಲಂಬನೆಗಿಂತ ಮುಖ್ಯವಾದದ್ದು ಮತ್ತೊಂದಿರಲಿಲ್ಲ. ನನ್ನ ವ್ಯಕ್ತಿತ್ವವನ್ನು, ನಾ ಬಯಸಿದ್ದನ್ನು ಮಾಡಬಲ್ಲ ಮೂಲಭೂತ ವ್ಯಕ್ತಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ನನಗೆ ತುಂಬಾ ಮುಖ್ಯ' ಎನ್ನುವ ರೀನಾರಾಮಚಂದ್ರನ್, ಬದುಕು ನೀಡಿದ ಒಂದೊಂದು ಅವಕಾಶಗಳ ಬಿಟ್ಟುಕೊಡದೆ ದುಡಿದವರು. ಇಂದು ಯಾವ ಹೆಣ್ಣೂ ಹೆಮ್ಮೆಪಡಬಹುದಾದಂಥ 'ಜನರಲ್ ಮ್ಯಾನೆಜರ್' ಪದವಿಯಲ್ಲಿದ್ದಾರೆ. ರೀನಾರ ಬದುಕು ಪ್ರಜ್ಞಾವಂತ ತಂದೆ-ತಾಯಿಯರ ನೆರಳಲ್ಲಿ ಅರಳಿದ ಹೆಣ್ಣು ಮಕ್ಕಳ ಆತ್ಮವಿಶ್ವಾಸವನ್ನು ಸಾಧನೆಯನ್ನು ತೋರುತ್ತದೆ. ತಮ್ಮ ಧ್ಯೇಯ-ಗುರಿಯನ್ನು ಯಾವ ಕಾರಣಕ್ಕೂ ಬಿಟ್ಟುಕೊಡದೆ, ಅಧಿಕ ಪರಿಶ್ರಮದಿಂದ ಮನೆ-ಮಕ್ಕಳು-ಉದ್ಯೋಗ ಎಲ್ಲದರಲ್ಲೂ ಯಶಸ್ವಿಯಾದ ರೀನಾ ರಾಮಚಂದ್ರನ್ ಉದ್ಯೋಗಸ್ಥ ಮಹಿಳೆ ಏರಬಲ್ಲ ಎತ್ತರದ ಉಜ್ವಲ ಉದಾಹರಣೆಯಾಗಿದ್ದಾರೆ.

ಪುತ್ರಕಾಮೇಷ್ಟಿ ಮತ್ತೆ ಅವೈಚಾರಿಕತೆಯ ಕಂದರಕ್ಕೆ

ನೇಮಿಚಂದ್ರ

ಫೆಬ್ರುವರಿ ತಿಂಗಳಲ್ಲಿ ಪ್ರಸಿದ್ಧ ಪತ್ರಿಕೆಗಳಲ್ಲಿ ಬಂದ ಅರ್ಧಪುಟದ ಜಾಹಿರಾತು ' ಪುತ್ರಕಾಮೇಷ್ಟಿಯಾಗ-ಮಕ್ಕಳಿಲ್ಲದವರಿಗೆ ಆಶಾಕಿರಣ ' ಎಂದು ದೊಡ್ಡದಾಗಿ ಪ್ರಚಾರ ಮಾಡಿತು. ಹುಟ್ಟುವ ಹೆಣ್ಣು ಮಕ್ಕಳನ್ನು ಗರ್ಭದಲ್ಲಿಯೇ ಮುಗಿಸುವ ನಮ್ಮ ಚಿಂತಾಜನಕ ಸಾಮಾಜಿಕ ಸ್ಥಿತಿಯಲ್ಲಿ, 'ಪುತ್ರಭಾಗ್ಯ-ಮಹಾಭಾಗ್ಯ' ಎಂದು ಸಾರಿತು. ಮಕ್ಕಳಿಲ್ಲದವರ ಕಂಡು ಕನಿಕರದಿಂದ ಮಾಡ-ಹೊರಟ ಎಂಥಹುದೋ " ಪುಣ್ಯಕಾರ್ಯ " ಎಂದು ಮುಗ್ಧವಾಗಿ ಕಲ್ಪಿಸುವವರು ಯಾಗದ ನಿಯಮಾವಳಿ-ಗಳನ್ನು ಒಂದಿಷ್ಟು ಪರಾಮರ್ಶಿಸಿದರೆ ಇದೊಂದು ಹಣ-ಗಳಿಸುವ ಹೊಸ ಮಾರ್ಗವೇ ಎಂದು ಅಚ್ಚರಿ ಪಡಬೇಕಾ-ಗಬಹುದು. 'ಪುತ್ರಕಾಮೇಷ್ಟಿ ಯಾಗವೆಂದರೆ ನಮ್ಮ ಅರ್ಥದಲ್ಲಿ ಗಣಹೋಮ' ಎನ್ನುವ CARD ಹೆಸರಿನ ಈ ಸಂಸ್ಥೆ ಭಾಗವಹಿಸುವವರಿಗೆ ತಟ್ಟನೆ ಪುತ್ರಲಾಭ-ವಾಗುವ ಗ್ಯಾರಂಟಿಯೇನೂ ಕೊಡುವುದಿಲ್ಲ. ' ಈ ಯಾಗದ ಗುರಿ, ಯಾಗದ ಪರಿಣಾಮವನ್ನು ನೋಡು-ವುದು ಮಾತ್ರ' ಎಂದು ಅತಿ ಜಾಣತನದಿಂದ ಹೇಳುತ್ತಾ 'ಯಾರೇ ಬಯಸಿದ ಪುತ್ರಲಾಭವಾಗದಿದ್ದರೆ ಅದಕ್ಕೆ CARD ಜವಾಬ್ದಾರಿಯಾಗುವುದಿಲ್ಲ' ಎಂದು ಸ್ಪಷ್ಟ-ವಾಗಿ ನಮೂದಿಸಿದೆ. 'ಪ್ರವೇಶ ಉಚಿತ' ಎಂದು, ಮರುವಾಕ್ಯದಲ್ಲೇ " ಯಾಗದ ಸ್ಥಳ, ದೀಪಾಲಂಕಾರ, ಯಾಗದ ಖರ್ಚನ್ನು ಭಾಗವಹಿಸುವ ದಂಪತಿಗಳು ಹಂಚಿ-ಕೊಳ್ಳಬೇಕಾದ ಕಾರಣ 2,000/- ರೂಗಳ ಕಡ್ಡಾಯ ತೇರಬೇಕು' ಎಂದೂ ಹೇಳುತ್ತವೆ. 'ಯಾವುದೇ ಕಾರಣಕ್ಕೆ ಕಡೆಗೆ ಯಾಗ ರದ್ದಾದರೂ ಈ ಹಣವನ್ನು ಹಿಂತಿರುಗಿಸ-ಲಾಗದು' ಎಂಬುದರ ಅರ್ಥವನ್ನು ಪ್ರಜ್ಞಾವಂತರು ಓದಿ-ಕೊಳ್ಳಬೇಕು. ಇಂದು ವಿಜ್ಞಾನ ತಂತ್ರಜ್ಞಾನ ಮುಂದು-ವರೆದ ಈ ಕಾಲದಲ್ಲಿ, ವೈದ್ಯರಂಗ ಪ್ರನಾಳ ಶಿಶುಗಳ ಹುಟ್ಟಿಸುತ್ತಿರುವ ಸಮಯದಲ್ಲಿ, ಇಂದಿಗೂ ನಮ್ಮ ಸಮಸ್ಯೆಗಳಿಗೆ ಪೂರ್ವದ ಪುರಾಣದಲ್ಲಿ ಪರಿಹಾರಗಳ ಹುಡುಕ ಹೊರಡುವುದು ಎಷ್ಟು ಹಾಸ್ಯಾಸ್ಪದ. ಸಾಲ-ದಕ್ಕೆ ಪತ್ರಿಕೆಗಳೂ ಸುದ್ದಿಯ ಹೆಸರಲ್ಲಿ ಈ ಯಾಗದಲ್ಲಿ ಭಾಗವಹಿಸುವವರ ಆರಿಸಲು ಕಂಪ್ಯೂಟರ್ ಬಳಸುವು-ದನ್ನು, 70 ಕೆಜಿ ತುಪ್ಪ ಸುರಿವುದನ್ನು, 75 ಲಕ್ಷ ವೆಚ್ಚ ಮಾಡುವುದನ್ನು, ಸುದೀರ್ಘವಾಗಿ ವಿವರಿಸಿ ಯಾಗಕ್ಕೆ ಪುಕ್ಕಟೆ ಪ್ರಚಾರ ನೀಡಿವೆ.

'ಬಾಲಕರಿಲ್ಲದ ಬಾಳಿದ್ಯಾತರ ಜನ್ಮ' ಎಂದು ಬದುಕಿನ ಪುರುಷಾರ್ಥವೆಲ್ಲ ಮಕ್ಕಳ ಪಡೆಯುವುದರಲ್ಲಿದೆ ಎಂದು ನಂಬಿದ ನಮ್ಮ ಸಮಾಜದಲ್ಲಿ, ಮಕ್ಕಳಿಲ್ಲದ ದಂಪತಿಗಳ ಮನಸ್ಥಿತಿ ಸಾಮಾಜಿಕ ಒತ್ತಡಗಳಲ್ಲಿ ನಜ್ಜುಗುಜ್ಜಾಗಿರು-ತ್ತದೆ. ಮಕ್ಕಳಿಲ್ಲದ ಸ್ಥಿತಿ ಅತ್ಯಂತ ವೈಯಕ್ತಿಕ ಕೊರತೆ-ಯಾಗಿದ್ದು ಇಂಥಾ ದಂಪತಿಗಳ ನಾಜೂಕು ಮನಸ್ಥಿತಿಯ ದುರ್ಲಾಭ ಪಡೆಯುವ ಯಂತ್ರ-ತಂತ್ರ-ಪವಾಡಪುರುಷ-ರಿಗೇನೂ ನಮ್ಮಲ್ಲಿ ಕೊರತೆ ಇಲ್ಲ. ಆದರೆ ಇದೀಗ ದೊಡ್ಡ ದೊಡ್ಡ ಜಾಹಿರಾತುಗಳ ನೀಡಿ ಅತ್ಯಂತ ಅವೈಚಾರಿಕ ರೀತಿಯಲ್ಲಿ ' ಗಂಡುಮಗು ಶ್ರೇಷ್ಠ ' ವೆಂದು ಬೋಧಿ-ಸುತ್ತಿರುವುದು ಯಾರೇ ವಿಚಾರಪರ ನಾಗರಿಕನಿಗೂ ಕಳವಳವನ್ನುಂಟುಮಾಡುತ್ತದೆ. ವಿದ್ಯಾವಂತರೂ, ವೈದ್ಯ-ಕೀಯ ಸಹಾಯ ಪಡೆಯಬಲ್ಲ ಹಣವಂತರೂ ಇಂಥಾ ಯಾಗಗಳಲ್ಲಿ ಭಾಗವಹಿಸಲು ಧಾವಿಸುವುದು ದೊಡ್ಡ ವಿಷಾದ.

ಕುತೂಹಲವೆಂದರೆ ಯಾಗ ಭಾರೀ ಬಂದೋಬಸ್ತಿನಲ್ಲಿ ನಡೆಯಲಿದೆ. ಕ್ಯಾಮರಾ ಟೇಪ್ ರೆಕಾರ್ಡ್‌ರನಂಥಾ ವಸ್ತುಗಳ ಒಳಗೆ ಬಿಡಲಾಗುವುದಿಲ್ಲ. ಅಷ್ಟೇಅಲ್ಲ 8 ದಿನ ನಡೆವ ಈ ಯಾಗದ ಸಮಯದಲ್ಲಿ ಹೆಂಗಸರು ಹೊರಗಾಗುವ ಸಾಧ್ಯತೆ ಇರುವುದರಿಂದ, ಆ ಸೂಕ್ಷ್ಮವನ್ನು ಬಿಟ್ಟುಕೊಡದೆ 'ಬಹಿಷ್ಕೃತ ಮಹಿಳೆಯರೂ ಯಾಗದಲ್ಲಿ ಭಾಗವಹಿಸಬಹುದು. ಆದರೆ ಅವರು ಮೂರು ದಿನ ಸ್ನಾನ ಮಾಡುವಂತಿಲ್ಲ' ! ಎನ್ನುತ್ತದೆ ಯಾಗದ ನಿಯಮಾವಳಿ. ಯಾವ ಕಾರಣಕ್ಕೂ ಬರುವ ಜನರ ಕಳೆದುಕೊಳ್ಳಲು ಸಿದ್ಧವಿಲ್ಲದ ಉಪಾಯವಿದ್ದಂತಿದೆ.

ನಮ್ಮಲ್ಲಿ ಯಾಗ-ಪೂಜೆ-ಪುನಸ್ಕಾರಗಳು ಹೊಸತಲ್ಲ. ಅವೆಲ್ಲವನ್ನು ಪ್ರತಿಭಟಿಸುತ್ತಾ ಹೊರಡುವುದು ಸಾಧುವಲ್ಲ ಆದರೆ ಸ್ತ್ರೀ ವಿರೋಧಿ ಆಸೆಗಳಿಗೆ ಅಭಿಲಾಷೆಗಳಿಗೆ ಇಷ್ಟು ದೊಡ್ಡ ರೀತಿಯಲ್ಲಿ ಪ್ರಚಾರ ನೀಡುವುದನ್ನು ಪ್ರೋತ್ಸಾಹಿಸುವುದನ್ನು ಖಂಡಿಸಬೇಕಿದೆ. ವಿಷಾದದ ಸಂಗತಿಯೆಂದರೆ ವಿದ್ಯಾವಂತರೂ, ವಿಜ್ಞಾನ ಓದಿದವರೂ ಇಂಥಾ ಅವೈಚಾರಿಕ ಕಾರ್ಯಗಳಲ್ಲಿ ಭಾಗವಹಿಸಲು ಧಾವಿಸುವುದು. ನಾವು ಭಾರತೀಯರು ದ್ವಂದ್ವಗಳಲ್ಲಿ ಬಹಳ ಆರಾಮಾಗಿ ಬದುಕುತ್ತೇವೆ. ವಿಜ್ಞಾನ ಬಹಳಷ್ಟು ಜನಕ್ಕೆ 'ಪ್ರತಿಷ್ಠೆ ಗಳಿಸುವ' ಮಾರ್ಗವೇ ಹೊರತು 'ಜೀವನಕ್ರಮ'ವಲ್ಲ. ವಿಜ್ಞಾನದ ಆ ಅನ್ವೇಷಕ ಮನೋಭಾವವನ್ನು ಕೇವಲ ಪ್ರಯೋಗಾಲಯಕ್ಕೆ ಸೀಮಿತಗೊಳಿಸಿ ನಿಜ ಜೀವನದಲ್ಲಿ ಕಲಿತ ಸಂಪ್ರದಾಯಗಳ ಕಿಂಚಿತ್ತೂ ಪ್ರಶ್ನಿಸದೆ ಕುರುಡಾಗಿ ಆಚರಿಸುತ್ತೇವೆ. ಜಗತ್‌ಪ್ರಸಿದ್ಧ ವಿಜ್ಞಾನಿಗಳಲ್ಲೂ ಕೂಡಾ ವೈಜ್ಞಾನಿಕ ಮನೋಭಾವ ಇಲ್ಲದ ನಿದರ್ಶನಗಳಿವೆ ಅತ್ತ ಕ್ಲಾಸ್‌ರೂಮಿನಲ್ಲಿ ಗ್ರಹಣವನ್ನು ನೆರಳು-ಬೆಳಕುಗಳ ಆಟವೆಂದು ಅಚ್ಚುಕಟ್ಟಾಗಿ ವಿವರಿಸುವ ಪ್ರೊಫೆಸರ್‌ಗಳು, ಗ್ರಹಣವಾದೊಡನೆ ಮಂತ್ರ ಹೇಳಿಕೊಂಡು ಶಾಂತಿ ಮಾಡಿಕೊಳ್ಳುವುದಿದೆ. ಬದುಕನ್ನು ಅಚ್ಚುಕಟ್ಟಾಗಿ Compartment ಗಳಲ್ಲಿ ವಿಭಾಗಿಸಿ ಇದಕ್ಕೂ-ಅದಕ್ಕೂ ಸಂಬಂಧವಿಲ್ಲವೆಂಬಂತೆ ಎರಡೂ ದಿಕ್ಕಿನ ಚಿಂತನೆಗಳ ಒಂದೇ ವ್ಯಕ್ತಿತ್ವದಲ್ಲಿ ತೂರಿಸಿ ಬದುಕುವ ವಿಪರ್ಯಾಸ ನಮ್ಮದು.

ಆದರೆ ಈ ಯಾಗವನ್ನಾಗಲೀ, ಹೋಮ ಪವಾಡವನ್ನಾಗಲೀ ಪ್ರತಿಭಟಿಸುವುದರಿಂದ ಸುಧಾರಣೆ ಸಾಧ್ಯವಿಲ್ಲ ಇದು ಕೇವಲ ರೋಗದ ಲಕ್ಷಣಗಳ ನಿಗ್ರಹಿಸುವ ವಿಧಾನ. ರೋಗದ ಲಕ್ಷಣಗಳು ಕಂಡ ಕ್ಷಣದಲ್ಲಿ ಅವನ್ನು ನಿವಾರಿಸುವುದು ಅವಶ್ಯವಾದರೂ, ರೋಗದ ಮೂಲಕಾರಣಗಳ ಹುಡುಕಿ ರೋಗನಿರೋಧಕ ಶಕ್ತಿಯ ತುಂಬುವುದು ಅಗತ್ಯ. ಇಂದು ನಮ್ಮ ಪರಿಶ್ರಮ ವೈಜ್ಞಾನಿಕ-ವೈಚಾರಿಕ ಮನೋಭಾವವನ್ನು ಬೆಳೆಸುವತ್ತ ಇರಬೇಕು. ಹಿರಿಯರು ಹೇಳಿದ್ದನ್ನು ಪ್ರಶ್ನಿಸದೆ, 'Virtue' ಎಂದು ತಿಳಿವ ಸಂಪ್ರದಾಯವನ್ನು ಮೊದಲು ತ್ಯಜಿಸಬೇಕು. ನಮ್ಮ ಮಕ್ಕಳಿಗೆ ಕಲಿಕೆಯು ಕಂಠಪಾಠವಾಗಬಾರದು, ಮಕ್ಕಳಲ್ಲಿರುವ ಸಹಜವಾದ ಅನ್ವೇಷಕ ಮನೋಭಾವವ, ಪ್ರಶ್ನಿಸುವ ಹವ್ಯಾಸವ ಪ್ರೋತ್ಸಾಹಿಸಬೇಕು. ನಮ್ಮ ಪಠ್ಯಪುಸ್ತಕಗಳು, ಪಾಠಕ್ರಮಗಳು ಬದಲಾಗುತ್ತಿರುವ ಪರಿಸ್ಥಿತಿಯನ್ನು ಬದಲಾಗಬೇಕಾದ ಪರಿಸರವನ್ನು ಗಣನೆಗೆ ತೆಗೆದುಕೊಳ್ಳದೆ ಪೂರ್ವದ ಪೂರ್ವಗ್ರಹಗಳನ್ನೇ ಬೋಧಿಸುತ್ತಾ ಬಂದಿವೆ. ಇಂದಿಗೂ ಕೆ.ಜಿ. ತರಗತಿಯ ಪುಸ್ತಕಗಳು-'Father is the head of of the family. Father goes out to work. Mother cooks at home.' ಎಂದೇ ಬೋಧಿಸುತ್ತಾ ಮುಂದುವರೆಯುತ್ತವೆ. ಪವಾಡಗಳ, ಪುಣ್ಯಕತೆಗಳ ಹೇರಳವಾಗಿ ನಮ್ಮ ಪುಸ್ತಕಗಳು, ಸಮೂಹ ಮಾಧ್ಯಮಗಳು ಮಕ್ಕಳ ಮೇಲೆ ಹೇರಿ ಅವರಲ್ಲಿರುವ ಚಿಂತನಶೀಲತೆಯ ನಿರ್ಬಂಧಿಸುತ್ತವೆ.

ನಮ್ಮ ಸ್ನೇಹಿತರೊಬ್ಬರು ಹೇಳಿದಂತೆ, ಪ್ರತಿಯೊಬ್ಬ ಪ್ರಜ್ಞಾವಂತ ಪ್ರಜೆಯೂ ತನ್ನನ್ನು, ತನ್ನ ಕುಟುಂಬವನ್ನು, ಮುಂದುವರೆದು ತನ್ನ ಸ್ನೇಹ ವೃಂದವನ್ನು ಇಂಥಾ ಅವೈಚಾರಿಕತೆಯಿಂದ ಮುಕ್ತಗೊಳಿಸಲು ಶ್ರಮಿಸಬೇಕು. ಅತ್ಯಂತ ವೈಯಕ್ತಿಕ ನೆಲೆಯಲ್ಲಿ ಈ ವೈಚಾರಿಕ ಕ್ರಾಂತಿ ಹುಟ್ಟು ಪಡೆದು ಸಾರ್ವತ್ರಿಕವಾಗಬೇಕು.

ಸಂದರ್ಶನ

ಪ್ರಶಸ್ತಿ ಒಂದು ಮೆಚ್ಚುಗೆಯ ರೂಪ'



ಚಿತ್ರ ಜಿ. ಎಸ್. ಮಂಜುಳಾ

ಸಂದರ್ಶಿಸಿದವರು – ಡಾ॥ ಸುಮಿತ್ರಬಾಯಿ

ಡಾ॥ ಅನುಪಮ ನಿರಂಜನ ಪ್ರಶಸ್ತಿಯನ್ನು ಪಡೆದ ಖ್ಯಾತ ಲೇಖಕಿ ಶ್ರೀಮತಿ ಹೆಚ್. ವಿ. ಸಾವಿತ್ರಮ್ಮ ಅವರನ್ನು 'ಅಚಲ' ಕ್ಕಾಗಿ ಸಂದರ್ಶಿಸಲಾಯಿತು. ಅದರಿಂದ ಆಯ್ದ ಭಾಗ.

ಅಚಲ : ನಿಮ್ಮ ಕಾಲದಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಅಷ್ಟಾಗಿ ಪ್ರಚಾರದಲ್ಲಿರಲಿಲ್ಲವಲ್ಲ, ಆಗ ನಿಮಗೆ ಓದಲು ಅವಕಾಶ ಪ್ರೇರಣೆ ದೊರತದ್ದು ಹೇಗೆ ?

ಸಾ : ನನಗೆ ನೆನಪಿರುವ ಮಟ್ಟಿಗೆ, ಒಂದು ಪ್ರೇರಣೆ. ನಮ್ಮ ದೊಡ್ಡಪ್ಪನವರದು.. ಅವರಿಗೆ ಕಣ್ಣು ಆಪರೇಷನ್ ಆಗಿ ಕಣ್ಣು ಹೋಗಿಬಿಟ್ಟಿತು. ಲಂಡನ್ ಮಿಷನ್ ಸ್ಕೂಲ್‌ನಲ್ಲಿ ಅವರು ಲೆಕ್ಕ, ಇಂಗ್ಲೀಷ್, ಹೀಗೆ ಎಲ್ಲಾ ವಿಷಯಗಳನ್ನು ಪಾಠ ಹೇಳುತ್ತಿದ್ದರು. ನಮ್ಮ ಅಕ್ಕನನ್ನು ಅವರ ಜೊತೆಗಿರಲಿ ಎಂದುಬಿಟ್ಟಿದ್ದರು. ಅವಳಿಗೆ ಅವರು S.S.L.C ಮಾಡಿಸಿದರು. ನನಗಿಂತ ಎಂಟು ವರ್ಷ ಹಿರಿಯಳಾದ ಅಕ್ಕ ಓದಿದ್ದು, ನಮ್ಮೆಲ್ಲರಿಗೂ ಓದಲು ಅವಕಾಶ, ದಾರಿಗಳು ತೆರುಯುವಂತಾಯ್ತು.

ಅಚಲ : ನಿಮ್ಮ ಶಾಲಾ ದಿನಗಳ ಅನುಭವಗಳ ಬಗ್ಗೆ ಹೇಳುತ್ತೀರಾ ?

ಸಾ : ಆರು–ಏಳು ವರ್ಷದವರೆಗೆ ನಾನೂ ಲಂಡನ್ ಮಿಷನ್ ಸ್ಕೂಲಿಗೆ ಹೋಗುತ್ತಿದ್ದೆ. ನಮ್ಮ ತಂದೆ ರಾಮರಾವ್ ಅವರು ಮ್ಯಾಜಿಸ್ಟ್ರೇಟ್ ಆಗಿದ್ದು ಊರಿನಿಂದ ಊರಿಗೆ ವರ್ಗವಾಗಿ ಹೋಗಬೇಕಾಗುತ್ತಿತ್ತು. ರಾಮನಗರಕ್ಕೆ ವರ್ಗವಾದಾಗ ನಾನು ಲೋಯರ್ ಸೆಕೆಂಡರಿ ಎರಡನೇ ಫಾರಂನಲ್ಲಿ ಓದುತ್ತಿದ್ದೆ. ಅಲ್ಲಿನ ಶಾಲೆಯಲ್ಲಿ ಎರಡನೇ ಫಾರಂನಲ್ಲಿ ಹುಡುಗಿಯರು ಯಾರೂ ಇರಲಿಲ್ಲ. ಆದ್ದರಿಂದ ಒಂದನೇ ಫಾರಂನಲ್ಲಿದ್ದ ಹುಡುಗಿಯನ್ನು ನನ್ನ ಜೊತೆಗೆ ಕೂರಿಸುತ್ತಿದ್ದರು ! ಮುಂದೆ ಹಾಸನಕ್ಕೆ ವರ್ಗವಾಯಿತು. ಅಲ್ಲಿ ಬಾಲಕಿಯರ ಪ್ರೌಢ ಶಾಲೆ ಇರಲಿಲ್ಲ. ನಾನು ಹುಡುಗರ ಶಾಲೆಯಲ್ಲೇ ಕಲಿಯಬೇಕಾಗಿತ್ತು. ಅಲ್ಲಿ ಕೆಲವರು ತುಂಬ ದೊಡ್ಡ ದೊಡ್ಡ ಹುಡುಗರು ಹಲವು ತರಹದ ಕೀಟಲೆಗಳನ್ನು ಮಾಡುತ್ತಿದ್ದರಿಂದ ನನಗೆ ಹಾಸನದ ಶಾಲೆ ಅಷ್ಟೇನೂ ಹಿಡಿಸಿರಲಿಲ್ಲ.

ಅಚಲ : ಅಲ್ಲಿ ನೀವು ಓದಿದ್ದು ಸುಮಾರು ಯಾವ ವರ್ಷ ?

ಸಾ : ಆಗ ನನಗೆ 12–15 ವರ್ಷ. ಅಂದರೆ 1925 ರ ಸುಮಾರಿನಲ್ಲಿ ಎನ್ನಬಹುದು. ಆಮೇಲೆ ಮೈಸೂರಿಗೆ ವರ್ಗವಾಯಿತು. ಆಗ ಅನಿರೀಕ್ಷಿತವಾಗಿ ನಮ್ಮ ತಂದೆಯವರನ್ನು ಅರಮನೆಯಲ್ಲಿ ಸಹಾಯಕ ಕಾರ್ಯದರ್ಶಿ ಯಾಗಿ ನೇಮಿಸಿಕೊಂಡರು. ಅಲ್ಲೇ ಬಹಳ ವರ್ಷಗಳಿದ್ದವು. ಅಲ್ಲಿ ಒಂದು ಮಿಷನ್ ಸ್ಕೂಲ್‌ನಲ್ಲಿ ನನ್ನ ಎಸ್.ಎಸ್.ಎಲ್.ಸಿ. ಆಯಿತು.

ಅಚಲ : ಕನ್ನಡದಲ್ಲಿ ಬರೆಯುವ ಅಪೇಕ್ಷೆ ನಿಮಗೆ ಹುಟ್ಟಿದ್ದು ಯಾವಾಗ ? ಮೊದಲ ಪ್ರೇರಣೆ ಉಂಟಾದದ್ದು ಹೇಗೆ ?

ಸಾ : ಎಸ್.ಎಸ್.ಎಲ್.ಸಿ ಹಂತದಲ್ಲಿ ಕನ್ನಡ ಓದಲು ನನಗೆ ತುಂಬಾ ಸುಲಭದ ವಿಷಯವಾಗಿತ್ತು. ಎಲ್ಲಾ ಸಬ್ಜೆಕ್ಟ್‌ಗಳಲ್ಲಿ ಮೊದಲಿಗಳಾಗಿರಬೇಕು ಅನ್ನೋ ಆಸಕ್ತಿ ಇದ್ದರೂ ಕನ್ನಡ ಸಾಹಿತ್ಯವನ್ನೇ ಓದಬೇಕು ಅನ್ನೋ ಆಸಕ್ತಿ ನನಗೇನೂ ಆಗ ಇರಲಿಲ್ಲ. ಆ ರೀತಿ ಓದಬೇಕು ನಾನೂ ಏನನ್ನಾದರೂ ಬರಯಬೇಕು ಅನ್ನುವ ಆಸಕ್ತಿ, ಅಪೇಕ್ಷೆ ಹುಟ್ಟಿದ್ದು ಮುಂದೆ ಕಾಲೇಜಿನಲ್ಲಿ ತೀ. ನಂ. ಶ್ರೀ ಅವರ ಪಾಠಗಳನ್ನು ಕೇಳುತ್ತಾ ಅವರ ಪ್ರಭಾವಪೂರ್ಣ ವ್ಯಕ್ತಿತ್ವದ ವಲಯಕ್ಕೆ ಬಂದಾಗಲೇ. ನಂತರ ಮದುವೆಯಾಯಿತು. ಪತಿ ಕೆಲವು ಕಾಲ ವಿದೇಶಕ್ಕೆ ಅಧ್ಯಯನಕ್ಕೆಂದು ಹೋಗಿದ್ದರಿಂದ ನನ್ನ ಪದವಿ ಶಿಕ್ಷಣ ಮುಂದುವರೆಯಿತು. 1931ರಲ್ಲಿ ಬಿ.ಎ. ಆಯಿತು.

ಅಚಲ : ತೀ. ನಂ. ಶ್ರೀ. ಪ್ರಭಾವದಿಂದ ಕಾಲೇಜು ದಿನಗಳಲ್ಲಿ ನೀವು ಮೊದಲ ಬರಹಗಳು ಪ್ರಾರಂಭಿಸಿರಬಹುದಲ್ಲವೇ? ಆಗಿನ ನಿಮ್ಮ ಅನುಭವವೇನು ?

ಸಾ : ಇಲ್ಲ. ನೀವಂದಂತೆ ಆ ಅವಧಿಯಲ್ಲೂ ನಾನು ಬರೆಯಲು ಪ್ರಾರಂಭಿಸಲಿಲ್ಲ. ನನ್ನ ಪತಿಯವರು ಹಿಂತಿರುಗಿದ ಮೇಲೆ, ಅವರ ವೃತ್ತಿಯಿಂದಾಗಿ ದೇಶದ ವಿವಿಧ ಸ್ಥಳಗಳಿಗೆ ಅವರಿಗೆ ವರ್ಗವಾದ ಕಡೆಗೆಲ್ಲಾ ಹೋಗಬೇಕಾಗಿತ್ತು. ಸಾಕಷ್ಟು ಸ್ಥಳಗಳನ್ನು ಕಾಣುವಂತಾಯ್ತು. ಶಿವನ ಸಮುದ್ರದಲ್ಲಿದ್ದೆವು. ಭದ್ರಾವತಿಯಲ್ಲಿ ಸ್ವಲ್ಪಕಾಲವಿದ್ದವು, ಜೊತೆಗೆ ಮಕ್ಕಳು ಇನ್ನೂ ಚಿಕ್ಕವರಾಗಿದ್ದರು, ಆ ಹಂತ ದಾಟಿ, ಮಕ್ಕಳೆಲ್ಲಾ ಕೊಂಚ ದೊಡ್ಡವರಾಗಿ ಶಾಲೆಗೆ ಹೋಗತೊಡಗಿದನಂತರ ನನಗೆ ಬಿಡುವು ಹೆಚ್ಚಾಯಿತು. ಆಗ ಬಿಡುವನ್ನು ತುಂಬಲಿಕ್ಕಾಗಿ ನಾನು ಕಥೆಗಳನ್ನು ಬರೆಯಲು ಪ್ರಾರಂಭಿಸಿದ್ದು, ಮೊದಲು ಮೊದಲು ಕಥೆಗಾರ, ಕಥಾಂಜಲಿ, ಮೊದಲಾದ ಪತ್ರಿಕೆಗಳಿಗೆ ಬರೆದು ಕಳುಹಿಸುತ್ತಿದ್ದೆ. ಅವುಗಳಲ್ಲಿ ಸ್ಪರ್ಧೆಗಾಗಿ ಕಥೆಗಳನ್ನು ಆಹ್ವಾನಿಸುತ್ತಿದ್ದರು. ನಾನೂ ಕಳುಹಿಸುತ್ತಿದ್ದೆ, 5 ರೂ ಬಹುಮಾನ ಬರುತ್ತಿತ್ತು ! ಅದರಿಂದ ನನ್ನ ಕಥೆ ಜನಗಳಿಗೆ ಇಷ್ಟವಾಯಿತು ಎಂದು ಸಂತೋಷ ಆಗುತ್ತಿತ್ತು. ಕಥೆ ಬರೆದರೆ ಅದು ಪ್ರಕಟವಾಗುತ್ತೆ, ಆಗಬೇಕು ಅನ್ನೋ ದೃಷ್ಟಿಯಿಂದ ನಾನು ಬರೆಯಲೇ ಇಲ್ಲ. ಆಮೇಲೆ ಕಾವ್ಯಾಲಯದ ಮಾಲೀಕರಾದ ಚಿದಂಬರಂ ಅವರ ಪರಿಚಯವಾಯ್ತು. ನನ್ನ ಮೊದಲನೆಯ ಕಥಾ ಸಂಕಲನ 'ನಿರಾಶ್ರಿತೆ' (1949) ಅವರಿಂದ ಬೆಳಕು ಕಂಡಿತು.

ಅಚಲ : ಕಾವ್ಯಾಲಯದ ಪ್ರಕಾಶನ ಸಾಕಷ್ಟು ಪ್ರಸಿದ್ಧವಾಗಿದ್ದು ಅವರ ಪ್ರಕಟಣೆಗಳಿಗೆ ಸಾಹಿತಿಗಳ ವಲಯದಲ್ಲಿ ವಿಶೇಷ ಓದುಗರೂ ಇದ್ದರಲ್ಲ. ಆದ್ದರಿಂದ ನಿಮ್ಮ ಮೊದಲ ಕಥಾ ಸಂಕಲನಕ್ಕೆ ಸಾಹಿತಿಗಳಿಂದ ಜನಗಳಿಂದ ದೊರೆತ ಪ್ರತಿಕ್ರಿಯೆ ಯಾವ ರೀತಿಯಿತ್ತು ಎಂದು ನಿಮಗೆ ಕುತೂಹಲ.

ಸಾ : ನನ್ನ ಬರಹಗಳಿಗೆ ಎಲ್ಲಾ ರೀತಿಯ ಆಸಕ್ತಿ, ಪ್ರೋತ್ಸಾಹ ನೀಡಿ ಮೆಚ್ಚುತ್ತಿದ್ದರು. ಡಿ. ಡಿ. ವಿ. ಗುಂಡಪ್ಪನವರು, ನನ್ನ ಕಥೆಗಳ ಬಗ್ಗೆ ಸಂತೋಷಪಡುತ್ತಿದ್ದರು, ಅಷ್ಟೇ ಅಲ್ಲ, ಕಥೆಗಳಲ್ಲಿ ಯಾವ ಭಾಗ ಚೆನ್ನಾಗಿದೆ, ಇನ್ನೂ ಹೇಗಿದ್ದರೆ ಸೊಗಸಾಗಿರುತ್ತಿತ್ತು ಎಂಬುದನ್ನೆಲ್ಲಾ ವಿಶ್ಲೇಶಿಸುತ್ತಿದ್ದರು ಅವರಿಗೆ ನನ್ನ ಎಲ್ಲಾ ಪುಸ್ತಕಗಳನ್ನೂ ಕಳುಹಿಸುತ್ತಿದ್ದೆ. ಅವರೂ ಅವನ್ನೆಲ್ಲ ಓದಿ ಮೆಚ್ಚುಗೆ, ಸಲಹೆ ನೀಡುತ್ತಿದ್ದರು. ಚಿದಂಬರಂ ಅವರೂ ಸಾಹಿತ್ಯದಲ್ಲಿ ವಿಶೇಷ ಪರಿಶ್ರಮ, ಆಸಕ್ತಿ ಹೊಂದಿದ್ದವರು ನನ್ನ ಎಲ್ಲಾ ರಚನೆಗಳೂ ಕಾವ್ಯಾಲಯದಿಂದಲೇ ಪ್ರಕಟವಾಗಲು ಅವರಿಟ್ಟಿದ್ದ ವಿಶ್ವಾಸವೇ ಮುಖ್ಯ ಕಾರಣ.

ಅಚಲ ; ನಿಮ್ಮ ಬರವಣಿಗೆ ಹವ್ಯಾಸದ ರೂಪದ್ದಾಗಿತ್ತು ಎಂದಿರುವಿರಿ. ಸರಿ, ಆ ಬಗ್ಗೆ ನಿಮ್ಮ ಮನೆಯವರು ವಿಶೇಷವಾಗಿ ನಿಮ್ಮ ಪತಿಯವರ ಪ್ರತಿಕ್ರಿಯೆ ಹೇಗಿತ್ತು ?

ಸಾ : ನಮ್ಮ ಮನೆ ಪರಿಸರದ ಬಗ್ಗೆ ಹೇಳುವುದಾದರೆ ಮನೆ ಜನರು ಯಾರೂ, ಪತಿಯೂ ಸೇರಿದಂತೆ, ಎಂದೂ ನನ್ನ ಬರವಣಿಗೆಯನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಪತಿಯವರಿಗೆ ಇದರಲ್ಲೆಲ್ಲಾ ಆಸಕ್ತಿ ತೋರಿಸಲು ಬಿಡುವೂ ಇರುತ್ತಿರಲಿಲ್ಲ. ಹಾಗೆಂದು ಅವರೂ ಎಂದೂ ನನ್ನ ಬರವಣಿಗೆಗೆ ಅಡ್ಡಿಯನ್ನೂ ಉಂಟುಮಾಡಲಿಲ್ಲ.

ಅಚಲ : ನವೋದಯ ಪ್ರಗತಿಶೀಲದಂಥ ಸಾಹಿತ್ಯ ಚಳವಳಿಗಳ ಮಗ್ಗುಲಲ್ಲೇ ನೀವು ಬರೆಯುತ್ತಾ ಸಾಗಿದ್ದೀರಲ್ಲ ಆ ಚಳವಳಿಗಳ ನೇತಾರರೆನ್ನಬಹುದಾದ ಸಾಹಿತಿಗಳ ವಿಶಿಷ್ಟ ಸಾಹಿತ್ಯ ಧೋರಣೆಗಳು ನಿಮ್ಮ ಮೇಲೆ ಏನಾದರೂ ಪ್ರಭಾವ ಬೀರಿದ್ದವೆ ?

ಸಾ : ಆ ರೀತಿ ಚಳಿವಳಿಗಳು ಇದ್ದಿರಬಹುದು, ಆದರೆ ಅಂಥ ಯಾವುದೇ ಒಂದು ದೃಷ್ಟಿಕೋನ ಏನು ? ಹೇಗಿತ್ತು ? ಅನ್ನುವ ತಿಳುವಳಿಕೆ ಇಟ್ಟುಕೊಂಡು ನಾನು ಬರೆದವಳಲ್ಲ. ಮಾಸ್ತಿ, ಕಾರಾಂತ, ಬೇಂದ್ರೆ, ಪು.ತಿ.ನ.. ಕುವೆಂಪು ಮೊದಲಾದವರ ಕೃತಿಗಳನ್ನು ಆ ಕಾಲಕ್ಕೆ ನಾನೂ ಓದಿರಲೂ ಇಲ್ಲ. ಹಾಗೆ ಅವರನ್ನೆಲ್ಲ ಓದಿದ್ದು ಮುಂದೆ ಬೆಂಗಳೂರಿಗೆ ಬಂದು ನೆಲಸಿದ ನಂತರವೇ ಈಚೆಗಷ್ಟೇ ನೀವುಗಳೆಲ್ಲಾ ಸೇರಿ ನನ್ನನ್ನು 'ಲೇಖಕಿ' ಯನ್ನಾಗಿ ಮಾಡ್ತಿದ್ದೀರೆ ಹೊರತು ಸಾಹಿತ್ಯದ ಮಾದರಿಗಳನ್ನು ಎದುರಿಗಿಟ್ಟುಕೊಂಡು ಪ್ರಜ್ಞಾಪೂರ್ವಕವಾಗಿ ಲೇಖಕಿಯಾಗಲು ನಾನು ಯತ್ನಿಸಿದವಳಲ್ಲಮ್ಮ.

ಅಚಲ ; ಹೀಗಾದ್ದರಿಂದ ನಿಮಗೆ ನಷ್ಟವಾಯಿತು ಎನ್ನುವ ಭಾವನೆ ನಿಮಗೆ ಎಂದೂ ಬರಲಿಲ್ಲವೇ ? ಈಗಲೂ ಹಾಗೆ ಅನ್ನಿಸುವುದಿಲ್ಲ ?

ಸಾ ; ಬೆಂಗಳೂರಿಗೆ ಬಂದಮೇಲೆ ಅಂದ್ರೆ ಸುಮಾರು 1950 ರಿಂದ ಈಚೆಗೆ ಕನ್ನಡದ ಹಿರಿಯ, ಮಹತ್ವದ ಲೇಖಕರ ರಚನೆಗಳನ್ನು ಗಂಭೀರವಾಗಿ ಓದಿಕೊಂಡಿದ್ದೇನೆ, ಆದ್ದರಿಂದ ಹಿಂದೆ ಆಗಿದ್ದ ನಷ್ಟವನ್ನೆಲ್ಲಾ ತುಂಬಿಕೊಂಡಿದ್ದೇನೆ ಅಂತ ನನ್ನ ಭಾವನೆ. ಆದರೂ ವಿಶೇಷವಾಗಿ ಓದಿದ್ದು ಇಂಗ್ಲಿಷ್ ಸಾಹಿತ್ಯವನ್ನೇ.

ಅಚಲ : ಇಂಗ್ಲಿಷ್ ಸಾಹಿತ್ಯದಲ್ಲಿ ವಿಶೇಷವಾಗಿ ನಿಮ್ಮ ಆಸಕ್ತಿ ಯಾರ ಬಗ್ಗೆ ? ಎಂಥ ಸಾಹಿತ್ಯ ಮೆಚ್ಚಿದ್ದೀರಿ ?

ಸಾ : ಇಂಗ್ಲೀಷ್ ಕ್ಲಾಸಿಕ್ಸ್ ಎಲ್ಲಾ ವಿಶೇಷವಾಗಿ ಓದಿಕೊಂಡಿದ್ದೇನೆ.

ಅಚಲ : ಅನುವಾದದ ಕ್ಷೇತ್ರದಲ್ಲೂ ನೀವು ವ್ಯಾಪಕವಾಗಿ ಕೆಲಸ ಮಾಡಿದ್ದೀರಿ, ಆ ಬಗ್ಗೆ ಆಸಕ್ತಿ ಹುಟ್ಟಿದ್ದು ಹೇಗೆ ?

ಸಾ : ನಾನು ಮೊಟ್ಟ ಮೊದಲು Medieval India ಎನ್ನುವ ಇತಿಹಾಸದ ಪುಸ್ತಕವೊಂದನ್ನು ಕನ್ನಡಕ್ಕೆ ಅನುವಾದಿಸಿದ್ದೆ ನಮ್ಮ ತಂದೆಯವರೇ ಅದನ್ನು ಅಚ್ಚು ಹಾಕಿಸಿ, ಲೈಬ್ರರಿಗಳಿಗೆ ಸಪ್ಲೈ ಮಾಡಿದ್ದರು ನಂತರ ಕಾವ್ಯಾಲಯದವರಿಗಾಗಿ ರವೀಂದ್ರನಾಥ ಟ್ಯಾಗೂರ್ ಅವರ ಹಲವಾರು ಕೃತಿಗಳನ್ನೂ, ಬೇಯ್ನ್, ಡಿಕನ್ಸ್, ಚಕೋವ್ ಮೊದಲಾದವರ ರಚನೆಗಳನ್ನೂ ಅನುವಾದಿಸಿದ್ದೇನೆ. ಬಹುಷಃ ಇಂಗಿಷ್–ಕನ್ನಡಗಳೆರಡರಲ್ಲೂ ನನಗಿದ್ದ ಆಸಕ್ತಿ ಈ ಕೆಲಸಕ್ಕೆ ಸೇರಿಸಿತೆನ್ನಬೇಕು.

ಅಚಲ : ಬರವಣಿಗೆಯ ತಂತ್ರ, ಭಾಷೆ, ಶೈಲಿ ಮುಂತಾದ ವಿಷಯಗಳ ಬಗ್ಗೆ ನಿಮ್ಮ ವಿಚಾರಗಳು ಹೇಗೆ ? ಪ್ರಜ್ಞಾಪೂರ್ವಕವಾಗಿ ಆ ರೀತಿ ಹೊಸ ಪ್ರಯೋಗಗಳನ್ನು ಮಾಡಲು ಯತ್ನಿಸಿದ್ದೀರಾ ? ಈಗಿನ ಕೆಲವರ ರಚನೆಗಳಿಗೆ

ಹಾಗೂ ನಿಮ್ಮ ಸಮಕಾಲೀನರ ರಚನೆಗಳಿಗೂ ಹೋಲಿಸಿದಾಗಲೂ ನಿಮ್ಮ ಕಥೆಗಳಲ್ಲಿ ವಿಶಿಷ್ಟವೆನ್ನಿಸುತ್ತವೆಯೆಲ್ಲ ಅದರಿಂದ ಈ ಪ್ರಶ್ನೆ.

ಸಾ : ಆಗಲೇ ಹೇಳಿದ್ದೇನೆ, ಹಾಗೆ ಪ್ರಜ್ಞಾಪೂರ್ವಕವಾಗಿ ಯತ್ನಿಸಿದ್ದು ಅಂತ ಏನೂ ಇರಲಿಲ್ಲವಲ್ಲಮ್ಮ. "ಸಾಹಿತ್ಯ ರಚನೆ" ಅನ್ನೋದನ್ನ ಅಷ್ಟೊಂದು ಗಂಭೀರ ಕಳಕಳಿಯಾಗಿ ನಾನು ಮಾಡಿಕೊಂಡವಳೂ ಅಲ್ಲ, ಏನೋ ಬರೆದದ್ದು ಚೆನ್ನಾಗಿದೆ ಅಂತ ನನ್ನ ಮನಸ್ಸಿಗೆ ತೋರಿದರೆ ಪ್ರಕಟಣೆಗೆ ಕಳುಹಿಸುತ್ತಿದ್ದೆ. ಹೀಗೆ ಬರಯಬೇಕು ಎಂಬ ನಿಯಮ ಏನೂ ಇರಲಿಲ್ಲ.

ಅಚಲ : ಮಹಿಳೆಯರು ಹೆಚ್ಚಾಗಿ ಬರೆದಿರುವುದು ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ಅಂತ ಸಾಮಾನ್ಯ ನಂಬಿಕೆ. ನೀವು ಮಾತ್ರ ತೀರ ಇತ್ತೀಚೆಗೆ ಎರಡು ಕಾದಂಬರಿಗಳನ್ನು ಬರೆದಿದ್ದೀರಿ. ಅವುಗಳನ್ನು ಬಿಟ್ಟರೆ ವಿಶೇಷವಾಗಿ ಸಣ್ಣ ಕಥೆಯ ಕಡೆಗೇ ನಿಮ್ಮ ಒಲವಿದೆಯಲ್ಲ ಇದಕ್ಕೆ ಕಾರಣ ?

ಸಾ : ಈ ಪ್ರಶ್ನೆ ಈಚೆಗೆ ಬಹಳ ಜನ ನನ್ನನ್ನು ಕೇಳುತ್ತಿದ್ದಾರೆ. ಸರಳವಾಗಿ ಹೇಳುವುದಾದರೆ ನಾನು ಸ್ವಭಾವತ ತುಂಬಾ ಸೋಮಾರಿ. ಕಾದಂಬರಿ ಬರೆಯಲು ಬೇಕಾಗುವ ವ್ಯಾಸಂಗ ತಾಳ್ಮೆ ಇಲ್ಲದ್ದರಿಂದಲೇ ಬೇಗ ಬರೆದು ಬಿಡಲು ಸಾಧ್ಯವೆನಿಸುವ ಸಣ್ಣ ಕಥೆಯ ಮಾಧ್ಯಮಕ್ಕೆ ಹೆಚ್ಚಾಗಿ ತೊಡಗಿದೆ ಎನ್ನಬಹುದು (ನಗು)

ಅಚಲ : ಹೊರಗಿನ ಪ್ರಪಂಚದ ಜೊತೆ ನಿಮ್ಮ ಸಂಪರ್ಕ ತುಂಬಾ ಕಡಿಮೆ ಅಂತ ಹೇಳ್ತಿರಿ, ಆದರೂ ಸುತ್ತಲಿನ ಸಾಮಾಜಿಕ, ಆಗುಹೋಗುಗಳಿಗೆ. ದೇಶದ ಸ್ವಾತಂತ್ರ್ಯ ವಿಭಜನೆಯಿಂದ ಸಮಕಾಲಿನ ಪರಿಸ್ಥಿತಿಗಳಿಗೆ ಒಂದು ರೀತಿಯ ಸೂಕ್ಷ್ಮ ಪ್ರತಿಕ್ರಿಯೆ, ಸ್ಪಂದನ ನಿಮ್ಮ ಸಣ್ಣ ಕಥೆಗಳಲ್ಲಿ ತೋರಿಬರುತ್ತದೆ, ಅದರ ಬಗ್ಗೆ ವಿವರಿಸ್ತೀರಾ ?

ಸಾ : ನನ್ನ ಕಥೆಗಳಿಗೆ ವಸ್ತುವೊದಗಿಸಿರುವುದೆಲ್ಲ ಸ್ವಂತದ ಅನುಭವದ ಹಿನ್ನಲೆಯಿಂದಲೇ ಬಂದದ್ದೆನ್ನಲಾರೆ. ನನ್ನ ಸುತ್ತಲಿನವರಿಂದ, ಪರಿವಾರದ ಕುಟುಂಬದ ಜನರಿಂದ, ಬಂಧುಗಳಿಂದ ಕೇಳಿ ತಿಳಿದ ಅವರ ಅನುಭವ, ಮಾಹಿತಿಗಳನ್ನೇ ನಾನು ಕಥೆಯಾಗಿಸಿರೋದಷ್ಟೆ. ಅಲ್ಲದೆ ದೇಶದಲ್ಲೆಲ್ಲಾ ಸ್ವಾತಂತ್ರ್ಯದ ಆಂದೋಲನ ನಡೆದು ಅದರ ಫಲವಾಗಿ ವಿಭಜನೆ ನಡೆದಾಗ ದೇಶದಲ್ಲೆಲ್ಲಾ ವಾತಾವರ್ಣವೆಲ್ಲ ಅ ಸಂಗತಿಗಳ ತೀವ್ರ ಸ್ವಭಾವಕ್ಕೆ ಒಳಗಾಗಿತ್ತು. ಅದೆಷ್ಟು ಬಲವಾಗಿತ್ತೆಂದರೆ ಯಾರೊಬ್ಬರೂ ಅದರ ಪ್ರಭಾವದಿಂದ ಹೊರತಾಗಿ ತಟಸ್ಥವಾಗಿ ಉಳಿಯುವುದು ಸಾಧ್ಯವೇ ಇರಲಿಲ್ಲ. ಅಷ್ಟರ ಮಟ್ಟಿಗೆ ನಾನೂ ಪತ್ರಿಕೆ, ಮತ್ತು ಇತರ ಮಾಧ್ಯಮಗಳ ಮೂಲಕ ಆ ವಾತಾವರಣದಿಂದ ಪ್ರಭಾವಿತಳಾಗಿದ್ದೇನೆ ಅಷ್ಟೇ ಹೊರತು ನನ್ನದೇ ವಿಶೇಷತೆಯೇನಿಲ್ಲ, ನಮ್ಮ ಅಕ್ಕ ದೆಹಲಿಯಲ್ಲಿ ವಾಸವಾಗಿದ್ದು. ಒಂದು ರೀತಿಯ ನೇರವಾದ ಮಾಹಿತಿ ನನಗೆ ದೊರೆಯುತ್ತಿತ್ತು.

ಅಚಲ : ಸ್ವಾತಂತ್ರ್ಯ ಆಂದೋಲನದಂಥ ಸಂದರ್ಭಕ್ಕೆ ನಿಮ್ಮ ವೈಯಕ್ತಿಕ ಪ್ರತಿಕ್ರಿಯೆ ಏನು ?

ಸಾ : ತೀವ್ರಸ್ವರೂಪದಲ್ಲಿ ಅಲ್ಲದೆ ಉತ್ತರ ಭಾರತವೆಲ್ಲಾ ಆ ಘಟನೆಗಳಿಂದ ಪ್ರಭಾವಿತವಾಗಿದಷ್ಟು ದಕ್ಷಿಣ ಭಾರತ ಅದರಲ್ಲೂ ಕರ್ನಾಟಕ ಅಂಥ ಪ್ರಭಾವಕ್ಕೆ ಒಳಗಾಗಿರಲಿಲ್ಲ ಎಂದು ನನಗೆ ತೋರುತ್ತದೆ. ಇಲ್ಲಂತೂ ಮಹಾರಾಜರು ಜನರಿಗೂ ಬ್ರಿಟಿಷರಿಗೂ ಒಳ್ಳೆಯವರಾಗಿದ್ದರು. ಶಿಕ್ಷಣ, ಉದ್ಯೋಗ, ಮೊದಲಾದವುಗಳಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದ್ದರು. ಹಾಗಾಗಿ ನಮ್ಮಂಥವರಿಗೆ ಬ್ರಿಟಿಷರು ಇದ್ದಾರೆ ಅನ್ನೋದು ಅನುಭವಕ್ಕೆ ಬರ್ತಾ ಇದ್ದದ್ದು ಅಂದರೆ ದಸರಾ ವಿಶೇಷದ ದರ್ಬಾರುಗಳಲ್ಲಿ ಕವಾಯಿತು ಉತ್ಸವಾದಿಗಳಲ್ಲಿ

ಮಾತ್ರ (ನಗು). ಹೀಗಾಗಿ ಆ ಕಾಲದ ಚಳುವಳಿ ಮೊದಲಾದವುಗಳಲ್ಲಿ ನನ್ನ ಪಾಲೇನೂ ಇಲ್ಲ. ಆದರೆ ಒಂದು ಚಿಕ್ಕ ಅನುಭವ ನೆನಪಾಗುತ್ತದೆ.

ನಾವು ಭದ್ರಾವತಿಯಲ್ಲಿದ್ದೆವು. ದೇಶವಿಡೀ ಮೊಟ್ಟ ಮೊದಲ ಸ್ವಾತಂತ್ರ್ಯ ದಿನವನ್ನು ಆಚರಿಸಲು ಸಜ್ಜಾಗಿ ಸಡಗರಿಸುತ್ತಿತ್ತು. ಕರ್ನಾಟಕದಲ್ಲಿ ಮಾತ್ರ ಪ್ರತ್ಯೇಕ ಪ್ರಾಂತ್ಯದ ಬೇಡಿಕೆಯನ್ನು ಪ್ರತಿಪಾದಿಸಲು ರಾಮಸ್ವಾಮಿ ಮೊದಲಿಯಾರ್ ಅವರು ಒಂದು ಚಳುವಳಿ ಪ್ರಾರಂಭಿಸಿದ್ದರು, ಸ್ವಾತಂತ್ರ್ಯೋತ್ಸವದಲ್ಲಿ ಪ್ರಾಂತೀಯ ಧ್ವಜವನ್ನೇ ಏರಿಸಬೇಕು ಎಂಬ ಕಡ್ಡಾಯದ ವಾತಾವರಣ ಉಂಟಾಗಿತ್ತು. ನಮ್ಮದೇ ಆದ ಲೇಡಿಸ್ ಕ್ಲಬ್‌ನಲ್ಲಿ ನಾವು ಸ್ವಾತಂತ್ರ್ಯೋತ್ಸವ ಆಚರಿಸಲೂ ಕರ್ನಾಟಕದ ಧ್ವಜವನ್ನೇ ಬಳಸಲೆಂಬ ಒತ್ತಾಯ ವಿತ್ತು. ಆದರೆ ದೇಶಕ್ಕೆಲ್ಲಾ ಸ್ವಾತಂತ್ರ್ಯ ದೊರೆತದ್ದು ಒಂದೇ ರಾಷ್ಟ್ರೀಯ ಧ್ವಜದ ಅಡಿಯಲ್ಲೇ, ಅದನ್ನು ಆಚರಿಸುವುದೇ ಸರಿಯಾದದ್ದು ಎಂದು ನನ್ನ ನಂಬಿಕೆಯಾಗಿತ್ತು. ಆದ್ದರಿಂದ ನನ್ನ ಪತಿಯ ಸೂಚನೆಯನ್ನು ಮೀರಿ, ನಾವು ರಾಷ್ಟ್ರಧ್ವಜವನ್ನೇ ಏರಿಸಿ ಉತ್ಸವವನ್ನು ಆಚರಿಸಿದೆವು. ಇದರ ಪರಿಣಾಮವೆಂದರೆ ನಮ್ಮ ಶಿವಮೊಗ್ಗದ ಪೋಲೀಸರ ಕಪ್ಪು ಪಟ್ಟಿಯಲ್ಲಿ ನಮ್ಮ ಹೆಸರೂ ಸೇರಿತ್ತು. ಹಾಗೇ ನಮ್ಮ ಪತಿಗೆ ಕೂಡಲೇ ಕೆ.ಜಿ.ಎಫ್‌ಗೂ ವರ್ಗ ಮಾಡಿದರು !

ಅಚಲ : ರಾಮಾಯಣವನ್ನು ಆಧರಿಸಿದ ನಿಮ್ಮ ಎರಡು ಕಾದಂಬರಿಗಳಿಂದಾಗಿ ನೀವು ಇತ್ತೀಚೆಗೆ ಸಾಹಿತ್ಯಾಸಕ್ತರ ಗಮನ ಸೆಳೆದಿದ್ದೀರಿ ಹೆಣ್ಣಿನ ದೃಷ್ಟಿಯಿಂದ ಇಡೀ ರಾಮಾಯಣಕ್ಕೆ, ಒಂದು ಹೊಸ ಅರ್ಥ ಕಲ್ಪಿಸುವ ನಿಮ್ಮ ಯತ್ನ ನಿಜಕ್ಕೂ ವಿಶಿಷ್ಟವಾದದ್ದು. ಸ್ತ್ರೀಪಾತ್ರಗಳ ನಿಟ್ಟಿನಿಂದ ಪಿತೃ ಪ್ರಧಾನ ವ್ಯವಸ್ಥೆಯ ಚರಿತ್ರೆಯನ್ನು ವಿಶ್ಲೇಷಿಸುವ ರೀತಿ ಕನ್ನಡದಲ್ಲಿ ಒಂದು ಹೊಸ ಯತ್ನವೆನ್ನಬೇಕು. ಆದರಲ್ಲೂ ಬಹು ಪತಿತ್ವ ಪದ್ಧತಿಯನ್ನು ನೀವು ತೀಕ್ಷ್ಣವಾಗಿ ವಿಮರ್ಶೆಗೆ ಒಳಗಾಗಿದ್ದೀರಿ.

ಸಾ : ಹೌದು. ತುಂಬಾ ಕಷ್ಟಪಟ್ಟಿದ್ದಾರಲ್ಲ ಹೆಂಗಸರು ಆದರಿಂದ.

ಅಚಲ : ಪಟ್ಟಿದ್ದರು ಅಂತೇನು, ಈಗಲೂ ಅವೇ ಹೊಸ ರೂಪ ಧರಿಸಿ ಇದ್ದೇಇವೆಯಲ್ಲಾ. ಅದಿರಲಿ, "ವಿಮುಕ್ತಿ" ಕಾದಂಬರಿಯಲ್ಲಿ ವಾನರರ ಸಂಸ್ಕೃತಿಯ ನಿಟ್ಟಿನಿಂದ ಆರ್ಯರ ಸಂಸ್ಕೃತಿಯ ಪಥವನ್ನು ಪರಿಶೀಲಿಸುವ ಯತ್ನ ಕೂಡ ಹೀಗೆ ವಿಶಿಷ್ಟವಾದದ್ದು. ಇದು ವಿಶಿಷ್ಟ ರೀತಿಯ ಅನ್ಯ ಶಾಸ್ತ್ರೀಯ ಅಧ್ಯಯನದ ಪ್ರಭಾವವಾಗಿ ತೋರುತ್ತದಲ್ಲ ?

ಸಾ : ನಾನು ಆಂಥ್ರೋಪಾಲಜಿಯ ವಿದ್ಯಾರ್ಥಿನಿ ಏನೂ ಅಲ್ಲ, ನಮ್ಮ ದೇಶದ ಚರಿತ್ರೆಯನ್ನೇ ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ಯಾವಾಗಿನಿಂದಲೂ ಆರ್ಯ ಸಂಸ್ಕೃತಿ ದ್ರಾವಿಡ ಸಂಸ್ಕೃತಿಯನ್ನು ಹತ್ತಿಕ್ಕುತ್ತಲೇ ಬಂದಿದೆಯಲ್ಲವೇ? ಅದೇ ವಿಚಾರನ ಬಳಸಿಕೊಂಡಿದ್ದೇನೆ ಅಷ್ಟೇ. ಅಲ್ಲದೆ, ದಮನಕ್ಕೆ ಒಳಗಾದ ಜನರು ಯಾರೇ ಇರಬಹುದು, (ವಾನನರೋ, ಸ್ತ್ರೀಯರೋ) ಆ ದಮನದ ಅನ್ಯಾಯ, ಅವಮಾನ, ನೋವುಗಳನ್ನು ಅವರು ಮರೆಯುವುದು ಅಷ್ಟು ಸುಲಭವಲ್ಲ. ವಾನರರ ನೋವು ಅಂಥಾದ್ದು ಅಂತ ನನ್ನ ಭಾವನೆ, ತುಳಿತಕ್ಕೆ ಒಳಗಾದವರ ಮನದಲ್ಲಿ ಆ ನೋವಿನ ಪ್ರತಿಕ್ರಿಯೆ ಇದ್ದೇ ಇರುತ್ತದೆ.

ಅಚಲ ; ತೆಲುಗಿನಲ್ಲಿ ಮುಪ್ಪಾಳ ರಂಗನಾಯಕಮ್ಮ ಇದೇ ರೀತಿಯ ವಸ್ತುವನ್ನು ಹೊಂದಿರುವ 'ರಾಮಾಯಣ ವಿಷ ವೃಕ್ಷಮು 'ಜಾನಕೀ ವಿಮುಕ್ತಿ ಎಂಬ ಕೃತಿಗಳನ್ನು ಬಹಳ ಹಿಂದೆ ರಚಿಸಿದ್ದಾರೆ. ಅವುಗಳ ಪರಿಚಯ ನಿಮಗಿದೆಯೆ ?

ಸಾ : ಇಲ್ಲ. ನನಗೆ ಆ ಬಗ್ಗೆ ಗೊತ್ತಿಲ್ಲ, ಸೀತೆ ರಾಜಕುಮಾರಿ. ದೊಡ್ಡ ರಾಜಮನೆತನದಲ್ಲಿ ಜನಿಸಿ, ಎಳೆಯ ವಯಸ್ಸಿನಲ್ಲಿ ದೊಡ್ಡ ರಾಜಮನೆತನವನ್ನು ಸೇರಿದಾಕೆ, ಅವಳು ಅನುಭವಿಸಿದ ನೋವು, ಕಡಿಮೆಯದಲ್ಲ. ಚಿಕ್ಕ ವಯಸ್ಸಿನಲ್ಲಿ ಅನ್ಯಾಯದ ವಿರುದ್ಧ ಮಾತಾಡಲೂ ಆಕೆಗೆ ಹೆದರಿಕೆ. ಸೀತೆ "ರಾಮಾಯಣ"ದಲ್ಲಿ ಈ ಅಂಶ ವನ್ನು ವಿವೇಚಿಸಿದ್ದೇನೆ. ಅದೇ ಸೀತೆ "ವಿಮುಕ್ತಿ"ಗೆ ಬಂದಾಗ ಒಬ್ಬ ಅನುಭವದಿಂದ ಪ್ರಬುದ್ಧಳಾದ ಪ್ರೌಢ ಸ್ತ್ರೀ. ರಾವಣನಂಥ ವ್ಯಕ್ತಿ, ತನ್ನ ಪ್ರೀತಿಗಾಗಿ ಎಲ್ಲವನ್ನೂ ಬಿಡಲು ಸಿದ್ಧನಿರುವ ನಿಜವಾದ ಪ್ರೀತಿ ತೋರಿದ್ದಕ್ಕೆ ತದ್ವಿರುದ್ಧವಾಗಿ ರಾಮನ ಸಣ್ಣತನಗಳು ಒರೆಹಚ್ಚಿ ನೋಡಬಲ್ಲಳು. ಇದು ನನ್ನದೇ ಮನಸ್ಸಿನಲ್ಲಿ ರಾಮಾಯಣದ ಚಿಂತನೆ, ಅದನ್ನೇ ಈ ಕಾದಂಬರಿಗಳಲ್ಲಿ ಹೇಳಲು ಯತ್ನಿಸಿದ್ದೇನೆ.

ಅಚಲ : ಕಡೆಯದಾಗಿ "ವಿಮುಕ್ತಿ" ಕಾದಂಬರಿಗಾಗಿ ನಿಮಗೆ ಈಗ "ಅನುಪಮ ಪ್ರಶಸ್ತಿ" ದೊರೆತಿದ್ದು ನಿಮಗೆ ಸಂತೋಷವಾಗಿದೆಯೆ ?

ಸಾ : ಪ್ರಶಸ್ತಿ ಅನ್ನುವುದು ಜನರು ತೋರಿಸುತ್ತಿರುವ ಮೆಚ್ಚುಗೆಯ, ಆದರದ ಒಂದು ರೂಪ. ಆದ್ದರಿಂದ ನನಗೆ ಜನ ಮೆಚ್ಚಿದ್ದಾರೆಂದು ಆನಂದವಾಗಿದೆ.

Reg. No. MAG (5) PRC. DECL 036/86-87

BOOK-POST/PERIODICALS

To,

If undelivered please return to :
Jagruthi Mahila Adhyayana Kendra
26, 1st Main Road, Vyalikaval
Bangalore–560 003